ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಸಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೨೨—೩—೧೯೪೦.

ಸಂಪುಟ ೧೯] [ಸಂಚಿಕೆ ೪೩

ಭದ್ರತೆ! ವಿಶ್ವಾಸಾರ್ಹತೆ!! ಸುರಕ್ಷಿತತೆ!!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

1906 ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದದ್ದು.

ತನ್ನ ಭದ್ರತೆಯನ್ನು ಪದೇ ಪದೇ ತೋರಿಸಿ, ಠೇವಣಾತಿದಾರರಿಗೆ ಸುರಕ್ಷಿತತೆಯನ್ನು ಹೆಚ್ಚಿಸಿ,
ಸರ್ವರ ವಿಶ್ವಾಸಕ್ಕೆ ಪಾತ್ರವಾಗಿ, ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ದೇಶಿಯ ಸಂಸ್ಥೆ.

ನಿರಖು ಠೇವಣಾತಿ ಬಡ್ಡಿ ದರಗಳು: ಒಂದು ವರ್ಷಕ್ಕೆ :3½% (ಸಾಲಿಯಾನ ಠೇಕಡ)
ಎರಡು ವರ್ಷಕ್ಕೆ } 4% ,,
ಮೂರು ವರ್ಷಕ್ಕೆ }

ಒಂದು ವರ್ಷಕ್ಕಿಂತ ಕಡಿಮೆ ವಾಯಿದೆಯ, ಅಲ್ಪಾವಧಿಯ, ಠೇವಣಾತಿಗಳನ್ನು
ಅವಧಿಗೆ ತಕ್ಕ ಬಡ್ಡಿ ದರಗಳಲ್ಲಿ ಪಡೆಯಬಹುದು.

ಮೂರು ವರ್ಷದ ಠೇವ್ ಸರ್ಟಿಫಿಕೇಟುಗಳು:-ಬಡ್ಡಿಯು ವರವು ಸಾಲಿಯಾನ ಠೇಕಡಾ ೪ ರಲ್ಲಿ. ವಾಯಿದೆಯು ಮುಗಿದಲು, ಯಾವಾಗಲೂ 15 ದಿನಗಳ ನೋಟೀಸು ಕೊಟ್ಟಲ್ಲಿ ಹಣವನ್ನು ಹಿಂದಕ್ಕೆ ಪಡೆಯಬಹುದು

ಸೇವಿಂಗ್ಸ್ ಬೇಂಕ್ ಡಿಪಾಜಿಟ್ಟು:- ಒಂದು ಲೆಕ್ಕದಲ್ಲಿ ರೂ. 5,000 ದ ವರೆಗೆ ಹಣ ಇಡಬಹುದು. ಚೆಕ್ಕು ಮೂಲಕ ಹಣ ಹಿಂದೆ ಪಡೆಯಬಹುದು. ಸಾಲಿಯಾನ ಠೇಕಡಾ 2½ ಸಲೆಯಲ್ಲಿ ಬಡ್ಡಿ ನಡೆಯುವುದು.

ಕರೆಂಟ್ ಡಿಪಾಜಿಟ್ಟು, ಮೈಮ್ಯಾಲೇಪಿನ್ ಡಿಪಾಜಿಟ್ಟು ಲೆಕ್ಕಗಳನ್ನು ತೆರೆಯಬಹುದು.

ಬೊಂಬಾಯಿ, ಕಲ್ಕತ್ತಾ, ಮದ್ರಾಸು, ಕಲ್ಲಿಕೋಟೆ, ಕಣ್ಣಾನೂರು, ಬೆಂಗಳೂರು, ಮೈಸೂರು, ಮಂಗಳೂರು ಮುಂತಾದ
ಅನೇಕ ಸ್ಥಳಗಳ ಮೇಲೆ ಡ್ರಾಫ್ಟುಗಳನ್ನೂ ಚೆಕ್ಕುಗಳನ್ನೂ ಕೊಡಬಹುದು; ವಟಾಯಿಸಲೂ ಬಹುದು.

52-13 ಚಿನ್ನಾಭರಣಗಳ ಮೇಲೆ ಸಾಲಗಳು ಯಾವಾಗಲೂ ಸಿಗುತ್ತವೆ.

ವಿಶೇಷ ಮಾಹಿತಿಯನ್ನು ಮಡಿಕೇರಿ ಮತ್ತು ವೀರಾಜಪೇಟೆ ಶಾಖೆಗಳಿಂದ ಪಡೆಯಬಹುದು.

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್,
ಕಟಪಾಡಿ,—ದ. ಕನ್ನಡ.
(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ನಂಜುಂಡೀಶ್ವರ.

52-19

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣ ರಾವ್,
ಜಿ. ಹೆಚ್. ಹೌಸ್.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನೂ ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಮ್ಮಯ್ಯನವರು.

ಹುದಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಜಿ: ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ ಕೆ. ಮೊಗಪ್ಪನವರು.

ನಾಪೋಕ್ಲು—ಮೆ. ಬೆಳ್ಳಿಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಪುಪ್ಪಣ್ಣನವರು.

ಸೂಚನೆ.—ಪ್ರಿಂಟುಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಪೂರ್ವ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣ ಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:— (ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:— (ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:— (ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-24) ಮತ್ತು ಆಯುರ್ವೇದ ವಿದ್ವಾನ್

ZANDU

ವೀರಾಜಪೇಟೆಯ ಏಜೆಂಟರು-ಕೆ. ರಾಮಕೃಷ್ಣರಾವ್,
ವೀರಾಜಪೇಟೆ (ಗ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್‌ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮಿಗಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮಿಗಿದೆ.

ಹೆಚ್ಚಿನ ವಿವರಗಳಿಗೂ, ಏಜೆಂಟರ್ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ನಂಜಪ್ಪ,
ಸೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್

ಅಥವಾ ಕೆಳಗಿನ ಯಾವುದಾದರೂ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀವಾರ್, ಬೆನಾರೀಸ್, ಬೆಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡೆಕ್ಕ, ದೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಹೆಟ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52-8

20. ಕಾಗದ ತಯಾರಿಸುವಿಕೆ, ಕೊಜೆಮಣ್ಣಿನಿಂದ ಭಕ್ಷ್ಯಪಾತ್ರೆಗಳನ್ನು ತಯಾರಿಸುವಿಕೆ, ಎಂತೆ ತಯಾರಿಸುವಿಕೆ ಮುತ್ತು ನೂಲುವ ಕಾಮಗಾರಿಗಳನ್ನು ಕೈಕೊಳ್ಳುವುದಕ್ಕೆ ಕೊಡಗಿನಲ್ಲಿ ಸಂಘಗಳನ್ನು ಸ್ಥಾಪಿಸುವ ಉದ್ದಿಶ್ಯ ಬ್ಯಾಂಕಿನಿಂದಾಗಲಿ, ಸರಕಾರದಿಂದಾಗಲಿ ಇಬ್ಬರನ್ನು ತರಬೇತಿಗೆ ಕಳುಹಿಸಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆಯೆಂತ ಮೆ. ಬಿ. ಡಿ. ಗಣಪತ್ತಿಯವರು ಸೂಚಿಸಿದರು.

ಮೆ. ಕುಟ್ಟಂಡ ಕಾರ್ಯಪ್ಪನವರು ಅನುಮೋದಿಸಿದರು.

ಮೆ. ಐ. ಪಿ. ಕಾರ್ಯಪ್ಪನವರು ಬ್ಯಾಂಕಿನಿಂದಾಗಲೀ ಎಂಬದನ್ನು ತೆಗೆಯಬೇಕಾಗಿ ಉಪ ತರಾವು ತಂದರು.

ಮೆ. ಗಳಾದ ಸಿ. ಕೆ. ಗಣಪತಿಯವರು, ಕೆ. ಕೆ. ಬೆಳ್ಯಪ್ಪನವರು, ಪಿ. ಜಿ. ಐಯ್ಯಪ್ಪನವರು ಉಪ ತರಾವಿಗೆ ವತ್ತಾಸೆಯಾಗಿ ಮಾತನಾಡಿದರು. ಈ ವಿಷಯವಲ್ಲಿ ದೀರ್ಘ ಚರ್ಚೆಯಾದ ನಂತರ ಉಪ ತರಾವುಗಳನ್ನು ಓಟಿಗೆ ಹಾಕಲಾಗಿ ಬಹುಮತದಿಂದ ಪಾಸಾಯಿತು.

21. ಪ್ರತಿಯೊಂದು ಯೂನಿಯನ್ನಿಗೂ ಒಬ್ಬೊಬ್ಬ ಸುಪರ್‌ವೈಜರನ್ನು ನೇಮಿಸತಕ್ಕದ್ದೆಂದು ಈ ಸಭೆಯು ತೀರ್ಮಾನಿಸುತ್ತದೆಯೆಂತ ಮೆ. ಹೆಚ್. ಯಂ. ಪುಷ್ಪಣ್ಣನವರು ಸೂಚಿಸಿದರು.

ಮೆ. ಅಜ್ಜಮಾಡ ಮಾದಪ್ಪನವರು ಅನುಮೋದಿಸಿದರು.

ಮೆ. ಪಿ. ಜಿ. ಐಯ್ಯಪ್ಪನವರು ವಿರೋಧಿಸಿ 'ಸಾಧ್ಯವಾದಷ್ಟು ಮಟ್ಟಿಗೆ' ಯೆಂದು ಸೇರಿಸಬೇಕೆಂದು ತಿದ್ದುಪಡಿ ತರಾವನ್ನು ತಂದರು. ಸೂಚಕರ ಒಪ್ಪಿಗೆಯಿಂದ 'ಸಾಧ್ಯವಾದಷ್ಟು ಮಟ್ಟಿಗೆಯೆಂದು ಸೇರಿಸಿದ ನಂತರ ತರಾವು ಸರ್ವಸಮ್ಮತದಿಂದ ಮುಂಜೂರಾಯಿತು.

22. ಸುಪರ್‌ವಿಜನ್ ಫಂಡಿನ ಚಂದಾವನ್ನು ಕೆಲವು ಸಂಘಗಳಿಂದ ಮಿತಿ ಇಟ್ಟು ಉಳಿದವುಗಳಿಂದ ಮಿತಿಯಿಲ್ಲದೆಯೂ ವಸೂಲು ಮಾಡುತ್ತಿರುವುದನ್ನು ನಿಲ್ಲಿಸಬೇಕು ಎಂಬದಾಗಿ ಮೆ. ಕುಂಞಪಂಡ ಚಿಣ್ಣಪ್ಪನವರು ಸೂಚಿಸಿದರು.

ಮೆ. ಉದಿಯಂಡ ಮಾಚಯ್ಯನವರು ಅನುಮೋದಿಸಿದರು.

ಮೆ. ಪಿ. ಜಿ. ಐಯ್ಯಪ್ಪನವರು ವಿರೋಧಿಸಿದರು. ಸೂಚಕರು ತರಾವನ್ನು ವಾಪಸು ತೆಗೆದುಕೊಂಡರು.

23. ಸುಪರ್‌ವೈಜರರ ಸೈಕಲ್ ಎಲೋವೆನ್ಸ್‌ನ್ನು ಮತ್ತು ಸಂಬಳದಲ್ಲಿ ಶೇಕಡ 25 ರಷ್ಟು ಕಮ್ಮಿ ಮಾಡಿ, ಸಂಘದ ಮೇಲುಸ್ತುವಾರಿಕೆ ತೆರಿಗೆಯನ್ನು ಶೇಕಡ 0-12-0 ಆಣೆಯಿಂದ 0-8-0 ಆಣೆಗೆ ಇಳಿಸಬೇಕೆಂದು ಈ ಸಭೆಯು ತೀರ್ಮಾನಿಸುತ್ತದೆಯೆಂಬ ತರಾವನ್ನು ಸೂಚಕರಾದ ಮೆ. ಪಳಂಗಂಡ ನಂಜಪ್ಪನವರು ವಾಪಸು ತೆಗೆದುಕೊಂಡರು.

24. ಈಗ ಇರುವ ಸುಪರ್‌ವಿಜನ್ ಫಂಡಿನ ದರವನ್ನು 0-12-0 ಆಣೆಯಿಂದ 0-8-0 ಆಣೆಗೆ ಇಳಿಸತಕ್ಕದ್ದು ಎಂಬ ತರಾವನ್ನು ಮೆ. ಕಂಬೀರಂಡ ಬೆಳ್ಯಪ್ಪನವರು ಸೂಚಿಸುವುದಕ್ಕೆ ಮೊದಲು 0-8-0 ಆಣೆಯ ಬದಲು 0-10-0 ಆಣೆ ಎಂಬದಾಗಿ ತಿದ್ದುಪಡಿ ಮಾಡಿ ತರಾವನ್ನು ಸೂಚಿಸಿದರು.

ಮೆ. ಹಬಿಬುಲ್ಲಾ ಖಾನ್‌ರವರು ಅನುಮೋದಿಸಿದರು.

ಮೆಗಳಾದ ಯಸ್. ಯನ್. ರಾಮು ಚೆಟ್ಟಿಯವರು, ಕೆ. ಸಿ. ಕರುಂಬಯ್ಯನವರು ಮತ್ತು ಮಂಡೇಯಂಡ ಕುಟ್ಟಪ್ಪನವರು ತರಾವನ್ನು ವಿರೋಧಿಸಿದರು.

ಅಧ್ಯಕ್ಷರು ಸುಪರ್‌ವಿಜನ್ ಫಂಡಿನ ಆದಾಯವೆಚ್ಚದ ಪಟ್ಟಿಯನ್ನು ವಿವರಿಸಿದರು. ಮೆ. ಕೂತಂಡ ಗಣಪತ್ತಿಯವರು ಸುಪರ್‌ವೈಜರುಗಳ ಸಂಖ್ಯೆಯನ್ನು ಕಮ್ಮಿ ಮಾಡಬೇಕೆಂದು ಹೇಳಿ ತರಾವನ್ನು ಒತ್ತಾಸೆಮಾಡಿದರು.

ತರಾವನ್ನು ಸೂಚಕರು ವಾಪಸು ತೆಗೆದುಕೊಂಡರು.

25. ಸುಪರ್‌ವಿಜನ್ ಫಂಡು ವಸೂಲಾತಿಯನ್ನು 12 ಆಣೆಯಿಂದ 9 ಆಣೆಗೆ ಇಳಿಸತಕ್ಕದೆಂಬದಾಗಿ ಮೆ. ಸುಬ್ಬಮ್ಮಂಡ ಈರಪ್ಪನವರು ಸೂಚಿಸಿದರು.

ಅನುಮೋದಕರು ಇಲ್ಲದ್ದರಿಂದ ತರಾವು ಬಿದ್ದುಹೋಯಿತು.

26. ಬ್ಯಾಂಕಿನ ಮಹಾ ಸಭೆಯ ವರದಿಯ ಯಥಾ ನಖಲನ್ನು ಬ್ಯಾಂಕಿಗೆ ಸಂಯೋಜನೆಯಾದಂಥಾ ಸಂಘಗಳಿಗೆಲ್ಲಾ ಮಹಾಸಭೆ ಕಳೆದು 15 ದಿನಗಳೊಳಗೆ ಕಳುಹಿಸತಕ್ಕದ್ದು ಎಂತ ಮೆ. ಪಳಂಗಂಡ ನಂಜಪ್ಪನವರು ಸೂಚಿಸಿದರು.

ಮೆ. ತೋಟಂಬೈಲು ಅಪ್ಪಣ್ಣನವರು ಅನುಮೋದಿಸಿದರು.

ಬ್ಯಾಂಕಿನ ಸೆಕ್ರಟರಿಯವರು '15 ದಿವಸದೊಳಗೆ ಎಂಬುದರ ಬದಲು 'ಒಂದು ತಿಂಗಳು' ಎಂಬದಾಗಿ ತಿದ್ದುಪಡಿ ತರಾವು ತಂದರು.

ಸೂಚಕರು ತಿದ್ದುಪಡಿಗೆ ಒಪ್ಪಿದರು.

ಮೆ. ನಾಯಂಡ ಚಿಣಪ್ಪನವರು ಮತ್ತು ಕೂತಂಡ ಗಣಪತ್ತಿಯವರು ತರಾವಿಗೆ ವಿರೋಧಿಸಿದರು.

ಮೆ. ಗಳಾದ ಪಿ. ಯಂ. ಉತ್ತಪ್ಪನವರು ಮತ್ತು ಮಡೆಯಂಡ ದೇವಯ್ಯನವರು ತರಾವಿಗೆ ಒತ್ತಾಸೆಯಾಗಿ ಮಾತಾಡಿದರು.

ತಿದ್ದುಪಡಿಯಾದ ತರಾವನ್ನು ಓಟಿಗೆ ಹಾಕಲಾಗಿ ಬಹುಮತದಿಂದ ಪಾಸಾಯಿತು.

27. 'ಸ್ಟೋರುಸಂಘಗಳನ್ನು ಇನ್ಸ್‌ಪೆಕ್ಟರು ಆಡಿಟ್ ಮಾಡಿದ್ದಕ್ಕೆ ಆಡಿಟ್ ಫೀಜು ಕೊಡಲೇಬೇಕಾಗಿರುವುದರಿಂದ ಅಬಗ್ಗೆ ಸುಪರ್‌ವಿಜನ್‌ಫಂಡು ವಸೂಲು ಮಾಡಕೂಡದು' ಎಂಬದಾಗಿ ಮೆ. ಕಂಬೀರಂಡ ಬೆಳ್ಯಪ್ಪನವರು ಸೂಚಿಸಿದರು.

ಮೆ. ಕೆ. ಜೆ. ಕುಟ್ಟಪ್ಪನವರು ಅನುಮೋದಿಸಿದರು.

'ಸ್ಟೋರು ಸಂಘಗಳು ಆಡಿಟ್ ಫೀಜು ಮತ್ತು ಸುಪರ್‌ವಿಜನ್ ಫಂಡು ಕೊಡಬೇಕಾಗಿರುವದರಿಂದ ಆಡಿಟ್ ಫೀಜನ್ನು ವಜಮಾಡಬೇಕು' ಎಂಬದಾಗಿ ಮೆ. ಕೆ. ಸಿ. ಕರುಂಬಯ್ಯನವರು ಉಪ ತರಾವು ತಂದರು.

ಮೆ. ಐ. ಪಿ. ಕಾರ್ಯಪ್ಪನವರು ಅನುಮೋದಿಸಿದರು. ಸೂಚಕರಾದ ಮೆ. ಕೆ. ಕೆ. ಬೆಳ್ಯಪ್ಪನವರು ಉಪ ತರಾವಿಗೆ ಒಪ್ಪಿಕೊಂಡರು.

ತರಾವು ಓಟಿಗೆ ಹಾಕಲಾಗಿ ಸರ್ವಸಮ್ಮತದಿಂದ ಪಾಸಾಯಿತು.

28. 'ಈಗ ಕರೆಯುವ ಸುಪರ್‌ವೈಜರ್ ಎಂಬದರ ಬದಲು ಕೋ-ಆಪರೇಟಿವ್ ಸಬ್ ಇನ್ಸ್‌ಪೆಕ್ಟರು ಎಂದು ಕರೆಯತಕ್ಕದ್ದು' ಎಂಬದಾಗಿ ಮೆ. ಕಂಬೀರಂಡ ಬೆಳ್ಯಪ್ಪನವರು ಸೂಚಿಸಿದರು.

ಮೆ. ಚೌರೀರ ಅಪ್ಪಯ್ಯನವರು ಅನುಮೋದಿಸಿದರು.

ಮೆ. ಐ. ಪಿ. ಕಾರ್ಯಪ್ಪನವರು ತರಾವನ್ನು ವಿರೋಧಿಸಿದರು.

ಸೂಚಕರು ತರಾವನ್ನು ವಾಪಾಸು ತೆಗೆದುಕೊಂಡರು.

29. ಕೋ-ಆಪರೇಟಿವ್ ಸುಪರ್‌ವೈಜರುಗಳಿಗೆ ಒಂದೇ ತರಹದ ಯೂನಿಫಾರಂ ಕೊಡಬೇಕು. 'ಅಲ್ಲದೆ ಕೂರ್ಗ್ ಕೋ-ಆಪರೇಟಿವ್ ಸರ್ವಿಸ್ ಎಂಬ ಬ್ಯಾಜನ್ನು ಸಹ ಕೊಡತಕ್ಕದ್ದು' ಎಂಬದಾಗಿ ಮೆ. ಕಂಬೀರಂಡ ಬೆಳ್ಯಪ್ಪನವರು ಸೂಚಿಸಿದರು.

ಮೆ. ಕೂತಂಡ ಗಣಪತ್ತಿಯವರು ಅನುಮೋದಿಸಿದರು.

ಮೆ. ಗಳಾದ ಕೆ. ಸಿ. ಕರುಂಬಯ್ಯನವರು, ಪಳಂಗಂಡ ನಂಜಪ್ಪನವರು ತೋಟಂಬೈಲು ಅಪ್ಪಣ್ಣನವರು ಮತ್ತು ಚೆಂಬಾಂಡ ಮಾದಪ್ಪನವರು ವಿರೋಧಿಸಿದರು.

ಮೆ. ಪಿ. ಯಂ. ಉತ್ತಪ್ಪನವರು ಯೂನಿಫಾರಂಮಿನ ಬದಲು ಸಹಕಾರ ಬ್ಯಾಡ್ಜನ್ನು ಕೊಡುವದು ಒಳ್ಳೆಯದೆಂತ ಸೂಚಿಸಿದರು.

ಧೀರ್ಘ ಚರ್ಚೆ ನಡೆದ ನಂತರ ಸೂಚಕರು ತರಾವನ್ನು ವಾಪಾಸು ತೆಗೆದುಕೊಂಡರು.

30. ಬ್ಯಾಂಕಿನಿಂದ ಸಂಘಗಳಿಗೆ ಕೊಡುವ ಸಾಲದ ಬಡ್ಡಿಯನ್ನು ಶೇಕಡ 6½ ಯಿಂದ 6ಕ್ಕೆ ಇಳಿಸತಕ್ಕದ್ದು' ಎಂಬದಾಗಿ ಮೆ. ಕಂಬೀರಂಡ ಬೆಳ್ಯಪ್ಪನವರು ಸೂಚಿಸಿದರು.

ಮೆ. ಕೆ. ಯಂ ಸುಬ್ರಾಯರು ಅನುಮೋದಿಸಿದರು.

ಮೆ. ಗಳಾದ ಕೆ. ಸಿ. ಕರುಂಬಯ್ಯನವರು, ಪಳಂಗಂಡ ನಂಜಪ್ಪನವರು ಮತ್ತು ಪಟ್ಟಡ ಉತ್ತಪ್ಪನವರು ಬಡ್ಡಿ ಕಮ್ಮಿಮಾಡುವದು ಮಹಾಸಭೆಯು ತೀರ್ಮಾನಿಸುವ ವಿಷಯವಲ್ಲ. ಬೈಲಾ ಮೇರೆ ಡೈರೆಕ್ಟರುಗಳಿಗೆ ಬಿಡಬೇಕಾಗಿದೆ ವಗೈರೆಯೂಗಿ ಮಾತಾಡಿ ತರಾವನ್ನು ವಿರೋಧಿಸಿದರು

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ

21 ನೇ ವಾರ್ಷಿಕ ಮಹಾ ಸಭೆ.

●○●

ಮೆ. ನಡಿಕೇರಿಯಂಡ ಸೋಮಯ್ಯನವರು ಬಡ್ಡಿಕರವನ್ನು 6½ಯಿಂದ 6¼ಕ್ಕೆ ಇಳಿಸಬೇಕಾಗಿ ತಿದ್ದುಪಡಿ ತರಾವು ತಂದರು.

ಮೆ. ಕೇತಿಯಂಡ ಕುಟ್ಟಪ್ಪನವರು ಅನುಮೋದಿಸಿದರು.

ಸೂಚಕರು ಈ ವಿಚಾರವನ್ನು ಡೈರೆಕ್ಟರುಗಳ ನಿರ್ಮಾನಕ್ಕೆ ಬಿಡಲು ಒಪ್ಪಿ ತರಾವನ್ನು ವಾಪಸು ತೆಗೆದುಕೊಂಡರು.

31. ಬೇರೆ ಕಡೆಯಲ್ಲಿ ನಡೆಯುವ ಸಹಕಾರ ಕಾನ್ಫರೆನ್ಸಿಗೆ ಬ್ಯಾಂಕಿನ ಡೈರೆಕ್ಟರುಗಳನ್ನೇ ಡೈರೆಕ್ಟರುಗಳು ಆರಿಸಿ ಕಳುಹಿಸುವವರೆಗೆ ಬದಲು ದೇಶವಲ್ಲಿ ಸಹಕಾರವಲ್ಲಿ ಅನುಭವವಿರುವವರನ್ನು ಮಹಾಸಭೆಯಲ್ಲಿ ಚುನಾಯಿಸತಕ್ಕದ್ದು' ಎಂಬದಾಗಿ ಮೆ. ಕಂಬೀರಂಡ ಬೆಳ್ಯಪ್ಪನವರು ಸೂಚಿಸಿದರು.

ಮೆ. ಕೇತಿಯಂಡ ಕುಟ್ಟಪ್ಪನವರು ಅನುಮೋದಿಸಿದರು.

ಮೆ. ಗಳಾದ ಪಿ. ಯಂ. ಉತ್ತಪ್ಪನವರು, ಕೂತಂಡ ಗಣಪತ್ತಿಯವರು ತೋಟಂಬೈಲು ಅಪ್ಪಣ್ಣನವರು ಸಿ. ಕೆ. ಸುಬ್ಬಯ್ಯನವರು, ಬಲ್ಲಡಿಚಂಡ ಬೋಪಯ್ಯನವರು, ಸಿ. ಕೆ. ಗಣಪತ್ತಿಯವರು ಮತ್ತು ಚೆಂಬಾಂಡ ಮಾದಪ್ಪನವರು ತರಾವಿಗೆ ಒತ್ತಾಸೆಯಾಗಿ ಮಾತಾಡಿದರು.

ಮೆ. ಗಳಾದ ಜಮ್ಮಾಡ ಮಾದಪ್ಪನವರು, ಕೆ. ಸಿ. ಕರುಂಬೈಯ್ಯನವರು, ನಾಯಪಂ ಚಿಂಣಪ್ಪನವರು, ಯನ್. ಸಿ. ಸುಬ್ಬಯ್ಯನವರು, ಪಳಂಗಂಡ ನಂಜಪ್ಪನವರು ಮತ್ತು ಪಿ. ಪಿ ಐಯ್ಯಪ್ಪನವರು ತರಾವಿಗೆ ವಿರೋಧಿಸಿದರು.

ತರಾವನ್ನು ಓಟಿಗೆ ಹಾಕಲಾಗಿ ಬಹುಮತದಿಂದ ತರಾವು ಬಿದ್ದು ಹೋಯಿತು.

32. 39-40ನೇ ಸಂವತ್ಸರಕ್ಕೆ ಅಧ್ಯಕ್ಷರ ಚುನಾವಣೆ ಕಾರ್ಯವು ಕೈಕೊಳ್ಳಲಾಯಿತು.

ಬ್ಯಾಂಕಿನ ಅಧ್ಯಕ್ಷ ಪದವಿಗೆ ಮೂ. ಶ್ರೀ. ಪಂಡ್ಯಂಡ ಬೆಳ್ಯಪ್ಪನವರ ಹೆಸರನ್ನು ಮೆ. ಪಿ. ಜಿ. ಮುದ್ದಮ್ಮಯ್ಯನವರು ಸೂಚಿಸಿದರು.

ಮೆ. ಅಂಡಮಾಡ ಗಣಪಯ್ಯನವರು ಅನುಮೋದಿಸಿದರು.

ಮೂ. ಶ್ರೀ. ಚೆಪ್ಪುಡಿರ ಪೂಣಚ್ಚನವರ ಹೆಸರನ್ನು ಮೆ. ಕೊಂಗಂಡ ಕಾರ್ಯಪ್ಪನವರು ಸೂಚಿಸಿದರು.

ಚೆಪ್ಪುಡಿರ ಸುಬ್ಬಯ್ಯನವರು ಅನುಮೋದಿಸಿದರು.

ಬ್ಯಾಲೆಟ್ ಮೂಲಕ ಓಟಿಗೆ ಹಾಕಲಾಗಿ ಮೂ. ಶ್ರೀ. ಪಂಡ್ಯಂಡ ಬೆಳ್ಯಪ್ಪನವರಿಗೆ 176 ಓಟುಗಳೂ, ಮೂ. ಶ್ರೀ. ಚೆಪ್ಪುಡಿರ ಪೂಣಚ್ಚನವರಿಗೆ 130 ಓಟುಗಳೂ ಸಿಕ್ಕಿದ್ದರಿಂದ ಮೂ. ಶ್ರೀ. ಪಂಡ್ಯಂಡ ಬೆಳ್ಯಪ್ಪನವರು ಪ್ರಸಿಡೆಂಟರಾಗಿ ಬಹುಮತದಿಂದ ಚುನಾಯಿತರಾದರು.

ಪ್ರೆಸಿಡೆಂಟರಾದ ಶ್ರೀ. ಪಂಡ್ಯಂಡ ಬೆಳ್ಯಪ್ಪನವರು ಬಿಡು ಮೆಂಬರೂ, ಸಂಘದ ಪ್ರತಿನಿಧಿಯೂ ಆದ ಕಾರಣ ಅವರು ಯಾವ ಸರ್ಕಲ್ ಡೈರೆಕ್ಟರಾಗಿರಬೇಕೆಂಬ ದಸ್ಕತ್ ರಾವು ಬಂದ್ದೂರ್ ಪಿ. ದೇವಯ್ಯನವರು ಚೀಟು ಎತ್ತಲಾಗಿ ಬಿಡು ಮೆಂಬರ

ರ ಪರ ಡೈರೆಕ್ಟರೆಂದು ನಿಶ್ಚೈಯಿಸಲಾಯಿತು.

33. 1939-40ನೇ ಸಂವತ್ಸರದ ಡೈರೆಕ್ಟರುಗಳ ಚುನಾವಣೆಯ 4 ಸ್ಥಳಕ್ಕೆ ಈ ಕೆಳಗಿನ ಮಹನೀಯರುಗಳ ಹೆಸರುಗಳನ್ನು ಬಿಡು ಮೆಂಬರುಗಳ ಪರವಾಗಿ ಸೂಚಿಸಿ ಅನುಮೋದಿಸಲಾಯಿತು.

ಓಟುಗಳು.

1. ಮೆ. ಗಳಾದ ಕಂಜಿತಂಡ ಕುಶಾಲಪ್ಪನವರು 39, (2) ರಾವ್‌ಬಹದೂರ್ ಪಿ. ದೇವಯ್ಯನವರು 43, (3) ಕೊಳ್ಳಿಮಾಡ ಕರುಂಬಯ್ಯನವರು 31, (4) ಪುಲಿಯಂಡ ಅಯ್ಯಪ್ಪನವರು 42, (5) ಕುಟ್ಟಂಡ ಎ ತಮ್ಮಯ್ಯನವರು 22, (6) ನಡಿಕೇರಿಯಂಡ ಸೋಮಯ್ಯನವರು 9, (7) ಚಿಪ್ಪುಡಿರ ಪೂಣಚ್ಚನವರು 32, (8) ಬೆಟ್ಟೋಳಂಡ್ರ ಮಾಚಯ್ಯನವರು 2, (9) ಮನೆಯಪಂಡ ಬೆಳ್ಯಪ್ಪನವರು 21, (10) ಮೆ. ಪಳಂಗಂಡ ಕರುಂಬಯ್ಯನವರು 10, (11) ಸಿ. ಯನ್. ವೆಂಕಪಯ್ಯನವರು 22, (12) ಕೀತಿಯಂಡ್ರ ಬೆಳ್ಯಪ್ಪನವರು 2.

ಬ್ಯಾಲೆಟ್ ಮೂಲಕ ಓಟು ತೆಗೆಯಲಾಗಿ ಈ ಕೆಳಗಿನ 4 ಮಹನೀಯರುಗಳನ್ನು ಬಿಡು ಮೆಂಬರುಗಳ ಪರವಾಗಿ ಡೈರೆಕ್ಟರಾಗಿ ಚುನಾಯಿಸಲಾಯಿತು.

(1) ರಾವ್ ಬಹದ್ದೂರ್ ಪಿ. ದೇವಯ್ಯನವರು 43, (2) ಮೆ. ಪುಲಿಯಂಡ ಐಯ್ಯಪ್ಪನವರು 42, (3) ಕಂಜಿತಂಡ ಕುಶಾಲಪ್ಪನವರು 39, (4) ಚಿಪ್ಪುಡಿರ ಪೂಣಚ್ಚನವರು 32,

34. ಸಂಘಗಳ ಪರವಾಗಿ ಈ ಕೆಳಗಿನ ಮಹನೀಯರುಗಳ ಹೆಸರುಗಳನ್ನು ಹತ್ತು ಡೈರೆಕ್ಟರುಗಳ ಸ್ಥಳಕ್ಕೆ ಸೂಚಿಸಿ ಅನುಮೋದಿಸಲಾಯಿತು.

ಓಟುಗಳು.

(1) ಮೆ. ಗಳಾದ ಕೊಳ್ಳಿಮಾಡ ಕರುಂಬಯ್ಯನವರು 144, (2) ಐನಂಡ ಕಾರ್ಯಪ್ಪನವರು 139, (3) ಯಸ್. ಯನ್. ರಾಮಚೆಟ್ಟಿಯವರು 124, (4) ಪುಲಿಯಂಡ ದೇವೈಯ್ಯನವರು 114, (5) ಪಿ. ಜಿ. ಮುದ್ದಮೈಯ್ಯನವರು 118, (6) ಅಜ್ಜಿಕುಟ್ಟಿರ ಪೊನ್ನಪ್ಪನವರು 83, (7) ಕಾಕಮಾಡ ಗಣಪತಿಯವರು 106, (8) ಮಂಡೇಪಂಡ ಸೋಮೈಯ್ಯನವರು 90, (9) ಹೆಚ್. ಯಂ. ಪುಷ್ಪಣ್ಣನವರು 93, (10) ಚೌರಿರ ಮಂದಣ್ಣನವರು 72, (11) ಬಲ್ಲಡಿಚಂಡ ಬೋಪೈಯ್ಯನವರು 33, (12) ಚೆಂಬಾಂಡ ಮಾದಪ್ಪನವರು 33, (13) ತೋಟಂಬೈಲು ಅಪ್ಪಣ್ಣನವರು 36, (14) ಕೊಕ್ಕಲೆರ ತಿಮ್ಮಯ್ಯನವರು 18, (15) ನಡಿಕೇರಿಯಂಡ ಸೋಮೈಯ್ಯನವರು 82, (16) ಕೀತಿಯಂಡ ಕುಟ್ಟಪ್ಪನವರು 62, (17) ಮನೆಯಪಂಡ ಬೆಳ್ಯಪ್ಪನವರು 71, (18) ಕಾಡ್ಯಮಾಡ ಐಯ್ಯನ್ಮನವರು 46, (19) ಬೆಟ್ಟೋಳಂಡ ಮಾಚೈಯ್ಯನವರು 74, (20) ಪಳಂಗಂಡ ಕರುಂಬಯ್ಯನವರು 73, (21) ಅಬ್ದುಲ್ ರಹಿಮಾನ್ ಖಾನ್‌ರವರು 13, (22) ತೆಕ್ಕಡ ಪೂವೈಯ್ಯನವರು 43, (23) ಜೆ. ಬಿ. ವೀರಭದ್ರಯ್ಯನವರು 12 (24) ಕಾಳೇಂಗಡ ಚಿಣ್ಣಪ್ಪನವರು 23, (25) ಕೊಂಗಂಡ ಕಾರ್ಯಪ್ಪನವರು 15, (26) ಬಿ. ಆರ್. ಸುಬ್ರಾಯನವರು 6, (27) ಕುಂಞಪಂಡ ಚಿಣ್ಣಪ್ಪನವರು 12, (28) ಯನ್. ಶಂಕರೈಯ್ಯನವರು 15.

ಬ್ಯಾಲೆಟ್ ಮೂಲಕ ಓಟು ತೆಗೆಯಲಾಗಿ ಈ ಕೆಳಗಿನ ಮಹನೀಯರುಗಳನ್ನು ಸಂಘಗಳ ಪರ ಬ್ಯಾಂಕಿನ ಡೈರೆಕ್ಟರುತನಕ್ಕೆ ಚುನಾಯಿಸಲಾಯಿತು.

ಓಟುಗಳು.

(1) ಮೆ. ಗಳಾದ ಕೊಳ್ಳಿಮಾಡ ಕರುಂಬಯ್ಯನವರು 144, (2) ಐನಂಡ ಕಾರ್ಯಪ್ಪನವರು 139, (3) ಯಸ್. ಯನ್. ರಾಮಚೆಟ್ಟಿಯವರು 124, (4) ಪುತ್ತಮನೆ ಮುದ್ದಮೈಯ್ಯನವರು 118, (5) ಮಡೆಯಂಡ ದೇವೈಯ್ಯನವರು 114, (6) ಕಾಕಮಾಡ ಗಣಪತಿಯವರು 106, (7) ಹೆಚ್. ಯಂ. ಪುಷ್ಪಣ್ಣನವರು 93, (8) ಮಂಡೇಪಂಡ ಸೋಮೈಯ್ಯನವರು 90, (9) ಬೆಟ್ಟೋಳಂಡ ಮಾಚೈಯ್ಯನವರು 74, (10) ಪಳಂಗಂಡ ಕರುಂಬಯ್ಯನವರು 73.

ಬ್ಯಾಂಕಿನ ಬೈಲಾ ನಂಬರು 27 ರ ಮೇರೆ ಮೇಲ್ಕಂಡ ಹತ್ತು ಡೈರೆಕ್ಟರುಗಳ ಪೈಕಿ ಒಂದರಿಂದ ಐದರ ವರೆಗೆ ಮೆಂಬರು ಸಂಘಗಳ ಪ್ರತಿನಿಧಿಗಳೆಲ್ಲರು ಸೇರಿ ತಮ್ಮೊಳಗೆ ಹೆಚ್ಚಿನ ಓಟು ದೊರೆತ ಐದು ಜನರನ್ನೂ (1) ಕಿಗ್ಗಟ್ಟುನಾಡು ತಾಲೋಕಿಗೆ ಮೆ. ಕಾಕಮಾಡ ಗಣಪತಿಯವರನ್ನೂ, (2) ಎಡೆನಾಲ್ಕುನಾಡು ತಾಲೋಕಿಗೆ ಮೆ ಮಂಡೇಪಂಡ ಸೋಮೈಯ್ಯನವರನ್ನೂ, (3) ಪಾಡಿನಾಲ್ಕುನಾಡು ತಾಲೋಕಿಗೆ ಮೆ. ಬೆಟ್ಟೋಳಂಡ ಮಾಚೈಯ್ಯನವರನ್ನೂ, (4) ಮಡಿಕೇರಿನಾಡು ತಾಲೋಕಿಗೆ ಮೆ. ಪಳಂಗಂಡ ಕರುಂಬಯ್ಯನವರನ್ನೂ, (5) ನಂಜರಾಜಪಟ್ಟಣ ತಾಲೋಕಿಗೆ ಮೆ. ಹೆಚ್. ಯಂ. ಪುಷ್ಪಣ್ಣನವರನ್ನೂ ಚುನಾಯಿಸಲಾಯಿತು.

ಅಧ್ಯಕ್ಷರ ಅನುಮತಿ ಮೇರೆ ಇತರ ವಿಷಯಗಳು.

35. ಕೈಕೇರಿ ಹರಿಜನ ಸಂಘದವರು ಅವರಿಗೊಂದು ರಾತ್ರಿ ಶಾಲೆ ಕಟ್ಟಲಿಕ್ಕಾಗಿ ಬ್ಯಾಂಕಿನ ಕಾಮನ್ ಗುಂಡ್ ಫಂಡಿನಿಂದ 200 ರೂಪಾಯಿಗಳನ್ನು ಉಚಿತಾರ್ಥವಾಧನ ಸಹಾಯ ಕೊಡಬೇಕೆಂದು ಬರಕೊಂಡ ಅರ್ಜಿ ಓದಲಾಯಿತು.

ಆ ಅರ್ಜಿಯ ಪ್ರಕಾರ ಹಣ ಕೊಡ ಕೂಡದೆಂದು ಮೆ. ಕೆ. ಕೆ. ಬೆಳ್ಯಪ್ಪನವರು ವಿರೋಧಿಸಿದರು.

ಮೆ. ಪಿ. ಜಿ. ಮುದ್ದಮೈಯ್ಯನವರು 50 ರೂಪಾಯಿ ಕೊಡಬಹುದೆಂದು ಸೂಚಿಸಿದರು.

ಮೆ. ಗಳಾದ ನಾಯಕಂಡ ಚಿಣ್ಣಪ್ಪನವರು, ಕೆ. ಜೆ. ಕುಟ್ಟಪ್ಪನವರು, ಜಮ್ಮಡ ಮಾದಪ್ಪನವರು ಮತ್ತು ತೋಟಂಬೈಲು ಅಪ್ಪಣ್ಣನವರು ಒತ್ತಾಸೆಯಾಗಿ ಮಾತಾಡಿದರು.

ಮೆ. ಮಡೆಯಂಡ ದೇವೈಯ್ಯನವರು 150 ರೂಪಾಯಿ ಕೊಡಬೇಕೆಂದು ಹೇಳಿದರು.

ಮೆ. ಪಳಂಗಂಡ ನಂಜಪ್ಪನವರು ಕಟ್ಟಡದ ವಿಷಯವನ್ನು ವಿಚಾರಿಸದೆ ಕೊಡಲು ನಾನು ವಿರೋಧಿಸುತ್ತೇನೆಂದೂ ಹಾಗೆ ವಿಚಾರಿಸಿ ಕೊಡಲು ನನ್ನ ಆಕ್ಷೇಪಣೆ ಇಲ್ಲವೆಂದೂ ಹೇಳಿದರು.

ಮೆ. ನಡಿಕೇರಿಯಂಡ ಸುಬ್ಬಯ್ಯನವರು ಮತ್ತು ಚೆಪ್ಪುಡಿರ ಸುಬ್ಬಯ್ಯನವರು 100 ರೂಪಾಯಿ ಕೊಡಬೇಕೆಂದು ಹೇಳಿದರು.

ಮೆ. ಪಿ. ಜಿ. ಮುದ್ದಮೈಯ್ಯನವರು ಸೂಚಿಸಿದ 50 ರೂಪಾಯಿ ಎಂಬದನ್ನು ವಾಪಸು ತೆಗೆದುಕೊಂಡರು.

ಈ ಬಾಬಿನಲ್ಲಿ ಓಟಿಗೆ ಹಾಕಲಾಗಿ 100 ರೂಪಾಯಿ ಕೊಡಬೇಕೆಂದು ಬಹುಮತದಿಂದ ತೀರ್ಮಾನಿಸಲಾಯಿತು.

36. ಬ್ಯಾಂಕಿನ ಇಂಗ್ಲಿಷ್‌ನಲ್ಲಿ ತರ್ಜುಮೆ ಮಾಡಿದ ಬೈಲಾವನ್ನು ಹೊಸ ಡೈರೆಕ್ಟರುಗಳ ಮಂಜೂರಾತಿಯಿಂದ ಪ್ರಿಂಟು ಮಾಡಿಸುವಂತೆ ತೀರ್ಮಾನಿಸಲಾಯಿತು.

37. ಬ್ಯಾಂಕಿನ ಕಾಮನ್ ಗುಡ್ ಫಂಡಿನಿಂದ ಜನರಲ್ ಬಾಡಿಯವರ ಮಂಜೂರಾತಿ ನಿರೀಕ್ಷಣೆ ಮೇತೆ ಖರ್ಚು ಮಾಡಿದ ಈ ಕೆಳಗಿನ ಮೊಬಲಗುಗಳನ್ನು ಮಂಜೂರ್ ಮಾಡಲಾಯಿತು.

(1) ಈ ದಿನದ ಜನರಲ್ ಮೀಟಿಂಗಿಗೆ ರೂ. 250 (2) ವೀರಾಜಪೇಟೆನಾಡು ದನಗಳ ಪ್ರದರ್ಶನಕ್ಕೆ ರೂ. 10 (3) ಅಜ್ಜನೆಟ್ಟರ ಗಣಪತಿಯವರ ಮನೆ ಬೆಂದು ಹೋದುದಕ್ಕೆ ರೂ. 15 (4) ಕೂಡಿಗೆ ರಾತ್ರಿ ಶಾಲೆಗೆ ರೂ. 20 (5) ಹಾಲು ಮಾರುವ ಸಂಘದ ದನಗಳ ಪ್ರದರ್ಶನಕ್ಕೆ ರೂ. 5 (6) ಈ ದಿನದ ವಸ್ತು ಪ್ರದರ್ಶನಕ್ಕೆ ರೂ. 50 ಜುಮ್ಲ ರೂ. 340.

38. ಉತ್ತಮವಾಗಿ ಕರೆ ಪಸಲು ಬೆಳೆಸಿದವರಿಗೂ ಮತ್ತು ಮನೆ ಮಾರುಗಳನ್ನು ಶುಚಿಯಾಗಿಟ್ಟುಕೊಂಡವರಿಗೂ, ಪ್ರತಿಯೊಂದು ಯೂನಿಯನ್ನಿಗೆ ಒಂದೊಂದು ಬಹುಮಾನ ಕೊಡುವಂತೆ ಮೆ. ಕೆ. ಕೆ. ಬೆಳ್ಯಪ್ಪನವರು ತಂದ ಸೂಚನೆಯು ಬಹುಮತದಿಂದ ಪಾಸಾಯಿತು.

ಈ ದಿನದ ವಸ್ತು ಪ್ರದರ್ಶನದಲ್ಲಿ ಉತ್ತಮವಾದ ವಸ್ತುಗಳಿಗೆ ಅಧ್ಯಕ್ಷರು ಇನಾಂಗಳನ್ನು ಹಂಚಿದರು.

ಅಧ್ಯಕ್ಷರ ಭಾಷಣ.

ಬ್ಯಾಂಕಿನ ಪ್ರೆಸಿಡೆಂಟರಾಗಿ ಪುನಹ ನನ್ನನ್ನು ಚುನಾಯಿಸಿದ್ದಕ್ಕೆ ನಿಮಗೆಲ್ಲರಿಗೂ ವಂದಿಸುತ್ತೇನೆ.

'ಈ ಬ್ಯಾಂಕು ಹಿಂದಿನ ವರ್ಷದ ಬಿಕ್ಕಟಿನಲ್ಲಿ ಕಷ್ಟಕ್ಕೆ ಈಡಾಗಿದ್ದರೂ ಕೂಡ ಹಿಂದಕ್ಕೆ ಹೆಜ್ಜೆ ಹಾಕದೆ ಮುಂದರಿಯುತ್ತಿರುವುದು ತೃಪ್ತಿಕರವೆಂದೂ, ಡೆಲ್ಲಿಯಲ್ಲಿ ನಡೆದ ರಿಜಸ್ಟ್ರಾರರ ಕಾನ್ಫರೆನ್ಸಿನಲ್ಲಿ ಕೊಡಗಿನ ಸಹಕಾರಿ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡುತ್ತಿವೆಯೆಂದು ಹೇಳಲು ನನಗೆ ಅವಕಾಶ ದೊರೆಯಿತೆಂದೂ ನಿಮಗೆ ತಿಳಿಸಲು ನಾನು ತುಂಬಾ ಸಂತೋಷಪಡುತ್ತೇನೆಂತ ಹೇಳಿ ತಮ್ಮ ಭಾಷಣವನ್ನು ಅಂತ್ಯಗೊಡಿ ರಿಜಸ್ಟ್ರಾರವರಿಗೂ, ಅವರ ತಾಳಿದಾರರಿಗೂ, ಮೂರ್ಕೆಟಿಂಗ್ ಆಫೀಸರವರಿಗೂ, ಈ ಶಾಲೆಯನ್ನು ಈ ದಿನದ ಮೀಟಿಂಗಿಗೆ ಬಿಟ್ಟುಕೊಟ್ಟ ಕಮಿಷನರವರಿಗೂ ಮತ್ತು ಹೆಡ್. ಮೋಸ್ಟರವರಿಗೂ ವಂದಿಸಿದರು.

ಈ ದಿನದ ಊಟ ಉಪಚಾರದ ವಿಷಯದಲ್ಲಿ ತೊಂದರೆ ತೆಗೆದುಕೊಂಡ ಯುವಕರಿಗೂ, ನಿವೃತ್ತರಾದ ಡೈರೆಕ್ಟರುಗಳಿಗೂ ವಂದಿಸಿ ಹೊಸಬರನ್ನು ಅಭಿನಂದಿಸಿದರು.

ಅಧ್ಯಕ್ಷರ ದೇಶಾಭಿಮಾನವನ್ನು ಮತ್ತು ಅವರ ಗುಣಗಳನ್ನು ವರ್ಣಿಸಿ ಅವರು ಈ ದಿನದ ಮೀಟಿಂಗನ್ನು ಸಾಂಗವಾಗಿ ನಡಿಸಿದಕ್ಕೆ ಸಭೆಯ ಪರವಾಗಿ ಮೆ. ಪಳಂಗಂಡ ನಂಜಪ್ಪನವರು ಅವರನ್ನು ವಂದಿಸಿದರು.

ಗೌರವ ಕಾರ್ಯದರ್ಶಿಯವರು ಕಳೆದ ಒಂದು ವರ್ಷದಿಂದ ಬ್ಯಾಂಕಿನ ಕೆಲಸವನ್ನು ತೃಪ್ತಿಕರವಾಗಿ ನಡಿಸಿಕೊಟ್ಟಗಕ್ಕೆ ಮೆ. ಪಳಂಗಂಡ ನಂಜಪ್ಪನವರು ಸಭೆಯ ಪರವಾಗಿ ಅವರನ್ನು ವಂದಿಸಿದರು.

ಮೆ. ತೋದಂಡ ದೇವೈಯ್ಯನವರು ಮತ್ತು ಟೆಂಪಲ್ ಫಂಡು ಕಮಿಟಿಯ ಪ್ರೆಸಿಡೆಂಟರು ಈ ದಿನದ ಆಡಿಗೆಗೆ ಪಾತ್ರಿವ ಗೈರಿಗಳನ್ನು ಕೊಟ್ಟದ್ದಕ್ಕೂ, ಮೆ. ಸಂಪೈಯ್ಯ ಪಟೇಲರು ಊಟಕ್ಕೆ ಬಾಳೆ ಎಲೆಗಳನ್ನು ಉಪ್ಪತ್ತಾಗಿ ಕೊಟ್ಟದ್ದಕ್ಕೂ ಮೆ. ಐನಂಡ ಕಾರ್ಯಪ್ಪನವರು ಸಭೆಯ ಪರವಾಗಿ ವಂದಿಸಿದರು.

ಅಧ್ಯಕ್ಷರಿಗೆ ವಂದನೆಯಿಂದ ಸಭೆಯು ಮಧ್ಯಾಹ್ನ 1 ಗಂಟೆಗೆ ಬರಕಾಸ್ತಾಯಿತು.

ಮಡಿಕೇರಿ, 18-2-40. ಪಿ. ಐ. ಬೆಳ್ಯಪ್ಪ, ಅಧ್ಯಕ್ಷರು.

ಮೂರಾಟಕ್ಕೆದೆ.

ವೀರಾಜಪೇಟೆನಾಡು ಮೈತಾಡಿಗ್ರಾಮದ ವಕ್ಕಲಿಗರ ನಿಂಗೇಗೌಡ್ರ ಮಗ ಪೀ ವರ್ಣನ ಹೆಸರಿನಲ್ಲಿ ಜಮೂಬಂದಿ ನಡೆಮು ಬರುವ ಕುಳ ನಂ. 38ರ ಸಾಗಿನ ಸ. ನ. 150/1ರ 16.70 ಏಕ್ರೆಯ ಪೈಕಿ, 13.36 ಸೆಂಟು ಭೂಮಿಯನ್ನೂ, ಸಾಗಿನ ಸ. ನ. 155/3ರ ಕೆತ್ತೆ ತೋಟದ 3. 90 ಯೋಜ್ಯದ ಪೈಕಿ 3.12 ಸೆಂಟನ್ನೂ, ಸಾಗಿನ ಸ. ನ. 155/4ರ ಕೆತ್ತೆ ತೋಟದ .80 ಸೆಂಟಿನ ಪೈಕಿ 64 ಸೆಂಟನ್ನೂ, ಸಾಗಿನ ಸ. ನ. 155/2ರ 8.69 ಏಕ್ರೆಯ ಜಾಣೆಯ ಪೈಕಿ 6.95 ಸೆಂಟನ್ನೂ ಮತ್ತು ಸ. ನ. 150/2ರ 0.03 ಸೆಂಟಿನ ಕೆರೆಯನ್ನೂ ಸಹ ವಿಕ್ರಯಿಸಲಾಗುತ್ತೆ. ಖರೀದಾರರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ಪತ್ತೆಗೆ ಬರೆದು ತಿಳಿದುಕೊಳ್ಳಬಹುದು. ಕಾಫಿ ಮತ್ತು ಕಿತ್ತಳೆ ವ್ಯವಸಾಯಕ್ಕೆ ಫಲವತ್ತಾದ ಬಾಣೆ ಜಾಗಗಳು.

ವಿ. ಯನ್. ದೇವಣ್ಣ,
ಮೈತಾಡಿಗ್ರಾಮ,
12-1 ಮೂರ್ನಾಡು.

ಕಾಂಗ್ರೆಸಿನ 53 ನೇ ಅಧಿವೇಶನವು ಈ ತಾ. 17, 18, 19 ಹಾಗೂ 20 ರಲ್ಲಿ ರಾಮಗಡದಲ್ಲಿ ನಡೆಯಿತು. ಈ ಸಾರಿಯ ಅಧಿವೇಶನವು ಕೆಲವು ವಿಶಿಷ್ಟ ರೀತಿಯಿಂದ ಕೂಡಿತ್ತು. ತಾರೀಕು 17 ರಲ್ಲಿ ಅಧ್ಯಕ್ಷರಾದ ಮೌಲನಾ ಅಬುಲ್ ಕಲಾಂ ಆಝಾದರಿಗೆ ಅಭೂತ ಪೂರ್ವ ಸ್ವಾಗತವನ್ನಿತ್ತು ಮಯೂರಾಕಾರದಲ್ಲಿ ಅಲಂಕೃತವಾಗಿದ್ದ ಕಾರಿನಲ್ಲಿ ಅವರ ಮೆರವಣಿಗೆ ನಡೆಯಿತು. ಲಕ್ಷೋಪಲಕ್ಷ ಜನರು ಇದರಲ್ಲಿ ಭಾಗವಹಿಸಿದ್ದರು. ಒಂದು ಕಾಲಕ್ಕೆ ಹಳ್ಳಿಗಾಡಾಗಿದ್ದ ರಾಮಗಡದ ಚಿತ್ರವು ಇಂದು ಅನಿರ್ಣನೀಯವಾಗಿರುವುದು. ಜನನದ ಮಹಾಸಾಗರದಂತೆ ಅದು ಕಂಡು ಬರುತಿತ್ತು. ಎಲ್ಲಿ ನೋಡಿದರೂ ಜನಸಂದಣಿಯೇ ಕಂಗೊಳಿಸುತ್ತಿತ್ತು. ಅಲ್ಲಲ್ಲಿ ಗಗನದಲ್ಲಿ ಹಾರಾಡುವ ರಾಷ್ಟ್ರೀಯ ಪತಾಕೆಗಳು, ಲಸ್ತಿನಿಂದ ಕೂಡಿ ತಮ್ಮ ಕಾರ್ಯಚಲ್ಲೇ ಮಗ್ನರಾಗಿರುವ ಸ್ವಯಂ ಸೇವಕರ ಪಲ, ಖಾಸಿನ ಸೀರೆಗಳನ್ನುಟ್ಟು ಅವಿಚ್ಛಿನ್ನವಾಗಿ ದುಡಿಯುತ್ತಿರುವ ಸ್ವಯಂ ಸೇವಕಾಪಥಕದ ದೃಶ್ಯ, ಮೇಲಾಗಿ ಕುಟೀರಗಳಿಂದ ರಾರಾಜಿಸುತ್ತಿರುವ ಆ ಹಳ್ಳಿಯ ನೋಟ, ಲಕ್ಷೋಪಲಕ್ಷ ಜನರನ್ನು ತನ್ನಂಚಪಲ್ಲಿ ಕುಳ್ಳಿರಿಸಿಕೊಳ್ಳುವಂತೆ ರಚಿಸಲ್ಪಟ್ಟಿರುವ ಚಪ್ಪರಗಳು, ತ್ರಿವರ್ಣದಿಂದ ಕೂಡಿದ ಅವುಗಳ ಮೇಲ್ಕಟ್ಟು ಇದೆಲ್ಲಾ ನಿಜವಾಗಿಯೂ ಕಣ್ಣಾರೆ ನೋಡಿ ಆನಂದ ಪಡಬೇಕಾದ ದೃಶ್ಯಗಳು. ಅಲ್ಲದೆ ವಿವಿಧ ರೀತಿಯ ವಸ್ತುಗಳ ಪ್ರದರ್ಶನ ಶಾಲೆ, ಅನೇಕ ರೀತಿಯ ಕಲಾಕೌಶಲ್ಯಗಳನ್ನೊಳಗೊಂಡು ತಯಾರಾಗಿರುವ ಖಾದಿ ಭಂಡಾರಗಳು, ಅನ್ನ ನೀರನ್ನು ತೊರೆದು ಖಾದಿ ವ್ಯಾಪಾರದಲ್ಲೇ ಬಿಡುವಿಲ್ಲದೆ ನಿರತರಾಗಿರುವ ಭಾಂದವರು, ಪತ್ರಿಕಾಪ್ರತಿನಿಧಿಗಳ ಪಡೆ, ಹಾಗು ಕಕ್ಕೆರಿದು ನೆರೆದ ಪ್ರೇಕ್ಷಕರ ದೃಶ್ಯ, ಹೆಚ್ಚೇಕೆ? ಈ ಒಡ ಲೇಖನಿಯು ರಂಜಿಗಡದ ಉತ್ಸಾಹಪೂರಿತ ಹಾಗೂ ಶಾಂತಿಯುತವಾದ ದೃಶ್ಯವನ್ನು ವರ್ಣಿಸಲಾರದು. ಇಂಥಾ ಆಮೂನವ ಸಾಗರದಲ್ಲಿ ಮುಳುಂಡರು ಸಭಾಪ್ರವೇಶ ಮಾಡುವ ಜಯಜಯೋಕಾರವನ್ನು ಬೇರೆ ವರ್ಣಿಸಬೇಕೇ?

ಅಂತು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಸಭೆಯು ತಾ. 17 ರಲ್ಲಿ (ವಿಷಯನಿಯಾಮಕ ಸಮಿತಿ) ಪ್ರಾರಂಭವಾಯಿತು. ಇಷ್ಟು ವರ್ಷಗಳಂತೆ ಹೆಚ್ಚಿನ ಠರಾವುಗಳು ಈ ವರ್ಷ ಇರಲಿಲ್ಲ. ಒಂದೇ ಒಂದು ಠರಾವಿತ್ತು. ಹಿಂದೆ ವರ್ಕಿಂಗ್ ಕಮಿಟಿಯು ತನ್ನ ಪಾಟ್ನಾದಲ್ಲಿ ನಡೆದ ಸಭೆಯಲ್ಲಿ ಅಂತರರಾಷ್ಟ್ರೀಯ ಹಾಗೂ ಭಾರತ ಭವಿಷ್ಯದ ಬಗ್ಗೆ ಸೂಚಿಸಿದ ಒಂದು ಠರಾವು ಮಾತ್ರ ಮಾಜಿ ರಾಷ್ಟ್ರಪತಿಗಳಾದ ರಾಜೇಂದ್ರ ಬಾಬುಗಳಿಂದ ಮಂಡಿಸಲ್ಪಟ್ಟಿತು. ಠರಾವುವನ್ನು ಮಂಡಿಸಿ ರಾಜನ್ ಬಾಬುಗಳು ಮಾಡಿದ ಭಾಷಣದ ಸಾರ ಹೀಗಿದೆ.

'ಯುದ್ಧ ಪ್ರಾರಂಭವಾದಾಗಲೆ ಬ್ರಿಟನು ತಾನು ಸ್ವಾತಂತ್ರ್ಯ ಪ್ರಜಾನೀತಿಯ ರಕ್ಷಣೆಗಾಗಿ ಯುದ್ಧದಲ್ಲಿ ತೊಡಗಿರುವೆನೆಂದು ಘೋಷಿಸಿ ಭಾರತವು ಸಹ ಯುದ್ಧ [illegible] ಎಂದು ಘೋಷಿಸಿತು. ಈ ಸಾರಿ ಗಾಂಧೀಜಿಯವರು ಅಧಿವೇಶನದ ತುರು. ಬ್ರಿಟಿಷರು ಈ ಧ್ಯೇಯದಿಂದ ಯುದ್ಧ ಮಾಡುವದಾದರೆ ಭಾರತದ ಸ್ಥಾನವೇನಾಗಬಹುದು? ಎಂಬ ವಿಚಾರ ಕಾಂಗ್ರೆಸು ಬ್ರಿಟಿಷ್ ಸರಕಾರವನ್ನು ಕೇಳಿತು. ಇದು ಯುದ್ಧದ ಕಾಲ. ಈಗ ಬ್ರಿಟಿಷ್ ರಾಜನೀತಿಜ್ಞರು ಎಂಥಾ ಬಿಕ್ಕಟ್ಟಿನಲ್ಲಿರುವರೆಂಬುದು ನಮಗೆ ತಿಳಿದೇ ಇದೆ. ಆದಕ್ಕಾಗಿಯೇ ಪೂರ್ಣ ಸ್ವಾತಂತ್ರ್ಯವೇ ನಮಗೆ ಬೇಕಾದುದೆಂದು ಕಾಂಗ್ರೆಸು ಪದೇ ಪದೇ ಸೂಚಿಸುತ್ತಿದ್ದರೂ ಈ ಸಮಯದಲ್ಲಿ ಕಾಂಗ್ರೆಸು ಬ್ರಿಟಿಷರ ಕಷ್ಟವನ್ನರಿತೇ 'ಪೂರ್ಣ ಸ್ವರಾಜ್ಯವನ್ನು ಕೊಡಿ' ಎಂದು ಕೇಳಲಿಲ್ಲ. ಬದಲಾಗಿ ಯುದ್ಧವಾದ ಕೂಡಲೇ ಸ್ವರಾಜ್ಯ ಕೊಡಲ್ಪಡುವದೆಂಬ ಮಾತು ಕೊಡಬೇಕೆಂದು ಕೇಳಿತು. ಆದರೆ ಬ್ರಿಟಿಷರ ಹೇಳಿಕೆಗಳು ನಮ್ಮನ್ನು ನಿರಾಶರನ್ನಾಗಿ ಮಾಡಿದೆ. ನಾವು ನಮ್ಮ ಧ್ಯೇಯಸಾಧನೆಯ ಮಾರ್ಗದಲ್ಲಿ ಮೈಲಿ ಮೈಲಿಗಳನ್ನು ದಾಟಿ ಹೋಗಬೇಕೆಂದು ಆಶಿಸಿದರೆ ಅದು ಬೇಡ, ಇಂಚು ಇಂಚಾಗಿ ಹೋಗಿ ಎಂದು ಬ್ರಿಟಿಷರು ಹೇಳುತ್ತಾರೆ. ಬ್ರಿಟಿಷರಿಗೆ ನಾವು ಯಾವ ರೀತಿಯಿಂದಲೂ ತೊಂದರೆ ಕೊಡಬೇಕೆಂದು ಇಚ್ಛಿಸುವದಿಲ್ಲ. ಇತರರನ್ನುರುಳಿಸಿ ತಾವು ಮೇಲೇರಬೇಕೆಂದು ನಮ್ಮ ಆಶೆಯಲ್ಲ. ನಾವು ಉದ್ಧಾರವಾಗುವದರಲ್ಲಿ ಅವರು ಪತನವಾದರೆ ಅದನ್ನು ತಡೆಯುವಬಾದರೂ ಹೇಗೆ? ನಾವು ಶತಮಾನಗಳಿಂದ ಜೀವಿಸುತ್ತಿರುವಂಥಾ ಪರಿಸ್ಥಿತಿ ಬ್ರಿಟಿಷರಿಗೆ ಬಂದಿದೆಯೇ? ಬ್ರಿಟಿಷರು ಸ್ವತಂತ್ರರು. ನಾವಾದರೂ ನಮ್ಮ ದೇಶದಲ್ಲಿಯೇ ಗುಲಾಮರು. ಗುಲಾಮರಾಗಿ ನಾವು ಶತಮಾನಗಳಿಂದ ಬದುಕಿ ನಮ್ಮ ಗುಲಾಮಗಿರಿಯ ಪರಿವೆಯೇ ಕೆಲವರಿಗಿಲ್ಲದಂಗಿದೆ. ಪರಿಸ್ಥಿತಿ ಹೀಗಿರುವಾಗ ನಮಗೆ ಉಳಿದಿರುವ ಒಂದೇ ಮಾರ್ಗವೆಂದರೆ ಸತ್ಯಾಗ್ರಹ. ಒಬ್ಬರು ಇಬ್ಬರು ಸತ್ಯಾಗ್ರಹ ಮಾಡುವದು ನಮಗೆ ಬೇಕಿಲ್ಲ. ಅವ್ಯವಸ್ಥೆಯಿಂದ ಸತ್ಯಾಗ್ರಹ ಹೂಡುವದೂ ಬೇಡ. ಅದು ಪ್ರಚಂಡವಾಗಿ ನಡೆಯಬೇಕು. ಕಾಂಗ್ರೆಸಿನ ಗೌರವಕ್ಕೆ ತಕ್ಕಂತೆ ನಡೆಯಬೇಕು. ಅಹಿಂಸೆಯು ಮೂರ್ತಿಮತ್ತಾಗಿರಬೇಕು. ಆದ್ದರಿಂದ ಅಂಥಾ ಸತ್ಯಾಗ್ರಹಕ್ಕೆ ನಾವು ಸದಾ ಸಿದ್ಧರಾಗಿರಬೇಕು.'

ನಂತರ ಪಂಡಿತ ಜವಾಹರರು ಠರಾವನ್ನು ಸಮರ್ಥಿಸಿ ಕಾನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯು ಭಾರತದ ಸಮಸ್ಯಾ ಪರಿಹಾರಿಯೆಂಬೂ, ಈ ಏರ್ಪಾಡಿಗೆ ಕೋಮು ವಾರು ಸಮಸ್ಯೆಯು ತೊಡಕೆಂದು ಹಲವರನ್ನುವರೆಂದೂ, ಆದರೆ ಮೂರನೆಯವರ ಆಡಳಿತವು ಇಲ್ಲಿ ಕೊನೆಗೊಳ್ಳದ ವಿನಹ ಐಕ್ಯತೆಯು ಇಲ್ಲಿ ನೆಲಸವೆಂದೂ ಹೇಳಿದರು. ಅನೇಕ ತಿದ್ದುಪಡಿಗಳು ಠರಾವಿಗೆ ಸೂಚಿಸಲ್ಪಟ್ಟವು. ಆದರೆ ವಿಷಧವಾದ ಚರ್ಚೆಯಾದ ನಂತರ ಪಾಟ್ನಾದಲ್ಲಿ ಪಾಸಾದ ಠರಾವೇ ಅಂಗೀಕೃತವಾಯಿತು. ಈ ಸಾರಿ ಗಾಂಧೀಜಿಯವರು ಅಧಿವೇಶನದಲ್ಲಿ ಪ್ರಮುಖ ಭಾಗವಹಿಸುತ್ತಿರುವರು. ಕಾಂಗ್ರೆಸ್ ಮಹಾಸಭೆಯಲ್ಲಿ ಈ ಪರ್ಷ ಅವರು ಇಂದಿನ ಬಿಕ್ಕಟ್ಟು ಹಾಗೂ ಮುಂದಿನ ಘೋರಣೆಯ ವಿಚಾರ ಭಾಷಣ ಮಾಡಿರುವರು. ಅಲ್ಲದೆ ಪ್ರತಿನಿಧಿಗಳ ಗುಪ್ತ ಸಭೆಯೊಂದು ನಡೆಯುವ ಏರ್ಪಾಡಾಗಿದೆ ಅದರಲ್ಲೂ ಮಹಾತ್ಮರು ಪ್ರಧಾನ ಪಾತ್ರವಹಿಸುವರೆಂದು ತಿಳಿದು ಬಂದಿದೆ.

ಸುಭಾಸ್ ಚಿಕ್ಕಲಿಂಗಂ ತಾ. 19 ರಲ್ಲಿ ನಡೆಯುವೇಕಷ್ಟೆ ಬಹಿರಂಗ ಅಧಿವೇಶನವನ್ನು ಬಂದು ಬನಮಂಡಾಕಲಂಯಿತು.

ಮಹಾತ್ಮರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಮಾಡಿದ ಭಾಷಣದ ಸಾರಾಂಶವನ್ನಿಲ್ಲಿ ಕೊಡಲಾಗಿದೆ–

'ಕಾಂಗ್ರೆಸ್ ಅಧಿವೇಶನ ಮತ್ತು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ ನಾನು ಭಾಷಣ ಮಾಡಬೇಕೆಂದು ಅಧ್ಯಕ್ಷರಿಗೆ ತಿಳಿಸಿದೆ. ಪಾಟ್ನಾದಲ್ಲಿ ಪಾಸಾದ ಗೊತ್ತುವಳಿಯು ಇಲ್ಲಿ ಅಂಗೀಕೃತವಾದ ನಂತರ ಭಾಷಣ ಮಾಡಬಹುದೆಂದು ಅವರು ಒಪ್ಪಿಗೆ ಇತ್ತರು. ಅದೇ ಪ್ರಕಾರ ನಾನು ಭಾಷಣ ಮಾಡುವವನಿದ್ದೇನೆ. ಕಳೆದ ಬೊಂಬಾಯಿ ಅಧಿವೇಶನದಿಂದೀಚೆಗೆ ನಾನು ಕಾಂಗ್ರೆಸಿನಿಂದ ಬಾಹಿರನಾಗಿದ್ದರೂ ನಾನೇನು ಬದಲಾಯಿಸಿಲ್ಲ. ನನಗೂ, ನಿಮಗೂ ಸಂಪರ್ಕವಿದ್ದೇ ಇದೆ. ನಿನ್ನುನ್ನು ಜ್ಞಾಪಿಸಿಕೊಳ್ಳಲು ನನಗೇನೂ ಕಷ್ಟವಿಲ್ಲ. ಇಂದು ನೀವು ಚರ್ಚಾಕೌಶಲ್ಯದಲ್ಲೂ ಮತ್ತು ವಿವಿಧ ಅಭಿವ್ಯಾಯಗಳನ್ನು ಮುಂದಿಡುವದರಲ್ಲೂ ಪೂರಾ ನುರಿತಿರುವಿರೆಂದು ಈ ಮೊದಲು ನಡೆದ ಪಾಟ್ನಾ ಠರಾವಿನ ಚರ್ಚೆಯೇ ನನಗೆ ಗೊತ್ತುಪಡಿಸಿದೆ. ಇದೆಲ್ಲಾ ಸಂತೋಷದ ವಿಚಾರ. ಇದು ಪ್ರಜಾಸತ್ತಾತ್ಮಕ ರಾಜ್ಯ ಸ್ಥಾಪನೆಕ್ಕೆ ಬೇಕಾದ ಅವಶ್ಯಕಗಳು. ನೀವು ಠರಾವನ್ನು ಬಹುಮತದಿಂದ ಅಂಗೀಕರಿಸಿರುವಿರಿ. ಸಂತೋಷದ ವಿಚಾರ. ನಾನು ಹಾಕಿರುವ ಶರತ್ತುಗಳೆಲ್ಲ ನೆರವೇರಿಸಲ್ಪಡದಿದ್ದರೂ ಸತ್ಯಾಗ್ರಹವನ್ನಾರಂಭಿಸಲು ಒಪ್ಪಿದ ಕಾಲವಿತ್ತು. ಆದರೆ ಇಂದು ಹಾಗಿಲ್ಲ. ನಾನು ಬಹಳ ಕಟ್ಟುನಿಟ್ಟಾಗಿದ್ದೇನೆ. ನಿಮ್ಮ ಮೇಲೆ ಕಾಠಿಣ್ಯದಿಂದ ವರ್ತಿಸಬೇಕೆಂದಲ್ಲ. ನೀನು ನಿಮ್ಮ ನಾಯಕನಾಗಬೇಕಾದರೆ ನನ್ನ ಶರತ್ತುಗಳನ್ನು ಮುಂದಿಡುವದು ನನ್ನ ಕರ್ತವ್ಯ. ಭಾರತೀಯರಾದ ನಮಗೆ ಬೇಕಾದುದೇನೆಂದು ನಾವು ವಿಷಧವಾಗಿ ತಿಳಿಸಿರುವೆವು. ಇದಕ್ಕಿಂಥಾ ಹೆಚ್ಚು ವಿಷಧವಾಗಿ ಸ್ಪಷ್ಟೀಕರಿಸುವದು ಅಸಾಧ್ಯ. ಬ್ರಿಟಿಷ್ ಸರಕಾರವಾದರೂ ತನ್ನ ಘೋರಣೆಯನ್ನು ಶ್ರುತಪಡಿಸಿದೆ. ಯುದ್ಧದಲ್ಲಿ ಧುಮುಕಿರುವ ಬ್ರಿಟನನ್ನು ನಾವೀಗ ಎದುರಿಸಿದರೆ ಅದಕ್ಕೆ ಕಷ್ಟ ಬರುತ್ತದೆ. ಈ ವಿಚಾರವಿರಲಿ, ಆದರೆ ಕಾಂಗ್ರೆಸಿನ ಶಕ್ತಿಯನ್ನು ಕಂಡು ಅನೇಕರು ತಮ್ಮ ಸ್ವಾರ್ಥದ ಬೇಳೆ ಬೇಯಿಸಲು ಕಾಂಗ್ರೆಸಿಗೆ ಸೇರಿರುವರು. ಅಂಥಾವರನ್ನು ಹೊರಹಾಕುವ ಸಾಮರ್ಥ್ಯ ಸಂಸ್ಥೆಗೆ ಬರಬೇಕು. ಶಿಸ್ತು ಬೇಕು. ಭಿನ್ನತೆಗಳು ಪರಿಹಾರವಾಗಬೇಕು.

ನನ್ನನ್ನು ನೀವು ನಿಮ್ಮ ನಾಯಕನನ್ನಾಗಿ ಚುನಾಯಿಸಿಕೊಂಡರೆ ನನ್ನ ಅಪ್ಪಣೆಯಂತೆ ನೀವು ವರ್ತಿಸಬೇಕು. ನನಗೆ ಯಾರ ಮೇಲೂ ದ್ವೇಷವಿಲ್ಲ. ಎಲ್ಲರೂ ನನ್ನ ಮಿತ್ರರು. ಜನನ್ನರವರೂ ನನ್ನ ಸ್ನೇಹಿತರು. ನನ್ನ ನುಂದೆ ಎಲ್ಲರೂ ಒಂದೇ. ನಾನೇನೂ ಮಹಾತ್ಮನೆಂದು ಹೇಳಿಕೊಳ್ಳುವದಿಲ್ಲ. ನಾನು ಒಬ್ಬ ಮನುಷ್ಯ. ತಪ್ಪು ನೂಡುತ್ತೇನೆ. ಪಾಪಗೂಡುತ್ತೇನೆ. ಎಲ್ಲರೂ ನನ್ನಂತೆಯೇ. ಉರ್ದು ಪತ್ರಿಕಗಳಲ್ಲಿ ನನ್ನ ಬೈಗಳ ಸುರಿಸುಳಿಯಿರಬಹುದು. ಆದರೆ ನನಗೆ ಕೋಪವಿಲ್ಲ. ಹಿಂದೂ ಮುಸ್ಲಿಂ ಐಕ್ಯವಿಲ್ಲದೆ ಸ್ವಾತಂತ್ರ್ಯ ಸಾಧ್ಯವಿಲ್ಲವೆಂದು ನನಗೆ ಖಚಿತ ತಿಳಿದಿದೆ. ನಾವಿಂದು ಹೋರಾಟ ಮಾಡಬೇಕಾದ್ದು ಕಾನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಗಾಗಿ. ಕಾನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಗೆ ಮುಸ್ಲಿಂ ಓಟುಗಳಿಂದ ಬರತಕ್ಕವರು ಹಿಂದೂ ಮುಸಲ್ಮಾನರಿಗೂ ಏನೂ ಸಂಬಂಧವೇ ಇಲ್ಲವೆಂದರೆ ತೀರಿತು. ಆಗಲೂ ನಾನು ಅವರೊಡನೆ ಚರ್ಚೆ ನಡೆಸುತ್ತೇನೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ನಾನು ವಿರೋಧಿಸುತ್ತಿರುವದಾದರೂ ನನಗೆ ಬ್ರಿಟಿಷರ ಬಗ್ಗೆ ದ್ವೇಷವಿಲ್ಲ. ಅವರನ್ನು ನಾಶ ಮಾಡಬೇಕೆಂದು ನನ್ನ ಇಚ್ಛೆಯಿಲ್ಲ. ನಾನೇನಾದರೂ ರಾಜಿಮಾಡಿಕೊಂಡರೆ ಭರತ ಖಂಡವನ್ನು ಮಾರಿಬಿಡುತ್ತೇನೆಂದು ತಿಳಿದುಕೊಳ್ಳಬೇಡಿ. ನಮ್ಮ ದೇಶದ ಬಲವನ್ನು ಹೆಚ್ಚಿಸಲು ನಾನು ಹಾಗೆ ಮಾಡುತ್ತೇನೆಂದು ತಿಳಿಯಿರಿ. ಒಟ್ಟಾರೆ ಈ ದೇಶಕ್ಕೂ, ಜಗತ್ತಿಗೂ ಒಳಿತನ್ನುಂಟುಮಾಡುವ ಸಾರ್ವತ್ರಿಕ ಸತ್ಯಾಗ್ರಹವೇ ನನ್ನ ದೃಷ್ಟಿಯಲ್ಲಿದೆ. ಸತ್ಯಾಗ್ರಹದಲ್ಲಿ ಪ್ರತಿಯೊಂದು ಕಾಂಗ್ರೆಸ್ ಸಮಿತಿಯೂ ಒಂದು ಅಂಗವಾಗಿರಬೇಕು. ನನ್ನ ಸಂಸ್ಥೆಯಂಥಾ ಒಂದು ಭಾರಿ ಸಂಸ್ಥೆಯು ನನ್ನ ಶರತ್ತುಗಳನ್ನು ಕೂಲಂಕುಶ ಪಾಲಿಸಬೇಕಾಗುತ್ತೆ. ಇಲ್ಲವಾದರೆ ಕೋಟ್ಯಾಂತರ ಪ್ರಜೆಗಳ ಪ್ರಾಣ ಹಾನಿಯೂದೀತು. ಭರತ ಖಂಡಕ್ಕೆ ದೊರೆತಿರುವ ಶಕ್ತಿಯನ್ನು ಉಳಿಸಿಕೊಳ್ಳಲು ನಾನೇ ನನ್ನ ಜೀವವನ್ನು ತೆರಬೇಕಾಗಿ ಬಂದೀತು. ನಾನು ನಿಮ್ಮ ನಾಯಕನಾಗಬೇಕಾದರೆ ನೀವು ನನಗೆ ಪೂರ್ತಿ ಶರಣುಹೋಗಬೇಕು. ಸತ್ಯಾಗ್ರಹ ಈಗಲೇ ಮಾಡಬೇಕೆಂದು ಯಾರಾದರೂ ಹಠಹಿಡಿದರೆ ಅದಕ್ಕೆ ನನ್ನು ಅಡ್ಡಿಯಿಲ್ಲ. ಅವರು ಕಾಂಗ್ರೆಸಿನ ಹೊರಗಡೆ ಸತ್ಯಾಗ್ರಹಮಾಡಬೇಕು. ಕಾಂಗ್ರೆಸಿನಲ್ಲಿದ್ದೂ ಕಾಂಗ್ರೆಸ್ ಆಜ್ಞೆಯನ್ನು ಉಲ್ಲಂಘಿಸುವದು ಸಾಧ್ಯವಿದೆ. ಆದರೆ ಅದು ಸತ್ಯಾಗ್ರಹ ಮಾರ್ಗದಲ್ಲಿ ಆಗಲಾರದು. ಸತ್ಯಾಗ್ರಹದಲ್ಲಿ ಎಷ್ಟು ಶಕ್ತಿ ಇದೆಯೆಂದರೆ ಅದನ್ನು ಪಯೋಗಿಸುವವನಿಗೆ ಅದು ಯಾವ ಕೆಡಕನ್ನೂ ಮಾಡಲಾರದು. ನೀವು ಬೇಕಾದರೆ ಬೇರೆ ನೀತಿಯ ಉಪಾಯವನ್ನು ಕಂಡುಹಿಡಿಯಬಹುದು. ಅಪರೆ ನನಗುರುವದು ಒಂದೇ ದಾರಿ. ಈಗಲೂ ನೀವು ನನಗೆ ನಿಮ್ಮ ಪೂರ್ಣ ಬೆಂಬಲವನ್ನೂ, ಸಹಕಾರವನ್ನೂ ಕೊಟ್ಟರೆ ಇನ್ನೊಂದು ತಿಂಗಳಲ್ಲೇ ಆದರ ಫಲವನೆಂಬುದು ನಿಮಗೆ ಗೊತ್ತಾಗುವದು.'

ಕಾಂಗ್ರೆಸ್ ವಿಷಯನಿಯಾಮಕ ಸಭೆ.

ಮಹಾತ್ಮರ ಶೋಧಪೂರ್ಣವಾದ ಭಾಷಣ.

ಪಾಟ್ನಾ ಠರಾವಿನ ಸಮರ್ಥನೆ.

ಕೊಡಗು

ಮೂರ್ಚಿ ಫಾರೀಕು ೨೨ ನೇ ಶುಕ್ರವಾರ ೧೯೪೦.

ಕೊಡಗಿನ ಮುಂದಿನ ಆಡಳಿತ ಕ್ರಮ.

ಹಿಂದೂಸ್ಥಾನದ ಇತರ ಭಾಗಗಳಂತೆಯೇ ಕೊಡಗಿನವರೂ ರಾಜಕೀಯ ವಿಚಾರದಲ್ಲಿ ಜಾಗೃತಿಗೊಂಡಿರುವರು. ತಮ್ಮ ಪ್ರಾಂತ್ಯದ ಆಡಳಿತವು ತಮ್ಮ ಪ್ರತಿನಿಧಿಯರಿಂದ ನಡೆಸಲ್ಪಡಬೇಕೆಂಬ ಕಾಂಕ್ಷೆಯು ಇಲ್ಲಿಯವರಲ್ಲಿ ಹುಟ್ಟಿ ಈ ಕಾಂಕ್ಷೆಯನ್ನು ನೆರವೇರಿಸಿಕೊಡಲು ಸುಮಾರು ಇಪ್ಪತ್ತು ವರ್ಷಗಳಿಂದೀಚೆ ಚಳವಳ ನಡೆಸುತ್ತಾ ಬಂದಿರುವರು. ಈ ಮೊದಲು ಇಲ್ಲಿಯ ನಿವಾಸಿಗಳು ವಿಶೇಷ ರಾಜಭಕ್ತರೆಂದೆನ್ನಿಸಿಕೊಂಡಿದ್ದರು. ಆದರೆ ಹಿಂದೂ ಸ್ಥಾನದಲ್ಲಿ ಮಹಾತ್ಮ ಗಾಂಧಿಯವರಿಂದ ಅಸಹಕಾರ ಚಳವಳವು ಪ್ರಾರಂಭಿಸಲ್ಪಟ್ಟಾಗ್ಯೆ ಇಲ್ಲಿಯ ಯುವಕರೂ ಕಣ್ತೆರೆದು ಭಾರತ ಭೂಮಿಯ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವನ್ನು ವಹಿಸಿ ತಮ್ಮ ದೇಶ ಭಕ್ತಿಯನ್ನು ಪ್ರದರ್ಶಿಸಿದರು. ಜನರ ಹೋರಾಟದ ಫಲಿತಾಂಶವಾಗಿ 1924 ರಲ್ಲಿ ದೊರೆತ ನ್ಯಾಯವಿಧಾಯಕ ಸಭೆಯಲ್ಲಿಯೂ, ಸರಕಾರದ ಇತರ ಆಡಳಿತದಲ್ಲಿಯೂ ಇಲ್ಲಿಯ ದೇಶೀಯರು ಭಾಗವಹಿಸಿ ಆಡಳಿತೆ ನಡೆಸುವದರಲ್ಲಿ ತಮಗಿರುವ ಶಕ್ತಿ ಸಾಮರ್ಥ್ಯವನ್ನು ಬಹಿರಂಗ ಪಡಿಸಿರುವರು. ಇತ್ತೀಚೆಗೆ ರಾಷ್ಟ್ರೋದ್ಧಾರದ ಯಾವ ಚಳವಳದಲ್ಲೂ ಕೊಡಗಿನವರು ಹಿಂದೆ ಬಿದ್ದಿರುವದಿಲ್ಲ. ಆದರೆ ಹಿಂದೂ ದೇಶದ ಇತರ ದೊಡ್ಡ ಪ್ರಾಂತಗಳಿಗೆ ರಾಜಕೀಯ ಸುಧಾರಣೆಗಳನ್ನು ಆಗಿಂದಾಗ್ಯೆ ಕೊಡುತ್ತಾ ಬಂದರೂ ಈ ಚಿಕ್ಕ ಪ್ರಾಂತದವರ ಕೂಗಿಗೆ ಸರಕಾರದವರು ಸಾಕಷ್ಟು ಗಮನ ಕೊಡಲಿಲ್ಲ. ಸತ್ಯಾಗ್ರಹ ಸಮರವು ಮುಗಿದ ನಂತರ ಇಲ್ಲಿಯ ನಿವಾಸಿಗಳು ತಮಗೂ ಜವಾಬ್ದಾರಿ ಸರ್ಕಾರ ಕೊಡಬೇಕೆಂದು ಆಂದೋಲನ ನಡೆಸಿದಾಗ್ಯೆ ಇಲ್ಲಿಯ ಸರಕಾರವನ್ನು ನಡೆಸಲು ಹಣದ ಅಭಾವವು ಅಡ್ಡಿಯೊಗುತ್ತಿರುವದರಿಂದ ಇವನ್ನು ಸರಿಗಟ್ಟಿದ ಕೂಡಲೇ ಸುಧಾರಣೆಯ ವಿಚಾರ ಆಲೋಚಿಸವ್ಹಾಗುವದೆಂದು ಈ ಮಹತ್ವದ ಪ್ರಶ್ನೆಯನ್ನು ಸರಕಾರದವರು ಮುಂದೆ ಹಾಕುತ್ತಾ ಬಂದರು. ಅವರ ವಾದಕ್ಕನುಗುಣವಾಗಿ ಈಗ ಸುಮಾರು ಹತ್ತು ವರ್ಷಗಳಿಂದ ಕೊಡಗಿನ ಆದಾಯನೆಚ್ಚಟ್ಟೆಯಲ್ಲಿ ಖರ್ಚು ಉತ್ಪತ್ತಿಯನ್ನು ಮೀರುತ್ತಾ ಬರುತಿತ್ತು. ಈ ಕಾರಣ ಸರಕಾರದ ವಾದಕ್ಕೂ ಬಲವಿತ್ತು. ಹಣದ ಅಭಾವದಿಂದ ಇಲ್ಲಿ ಪ್ರತ್ಯೇಕ ಜವಾಬ್ದಾರಿ ಸರಕಾರವನ್ನು ನಡೆಸಲು ಸಾಧ್ಯವಿಲ್ಲವೆಂತಲೂ ಆ ದೆಸೆಯಿಂದ ಈ ಪ್ರಾಂತವನ್ನು ಮದ್ರಾಸ್ ಪ್ರಾಂತಕ್ಕಾಗಲೀ ಮೈಸೂರು ಸಂಸ್ಥಾನಕ್ಕಾಗಲೀ ಸೇರಿಸಬೇಕೆಂಬ ಚಳವಳವು ಕೆಲವರಿಂದ ನಡೆಸಲ್ಪಟ್ಟಿತು. ಕೊಡಗಿನ ತಲೆಭಾರ ಸರಕಾರದ ದುಂದುಗಾರಿಕೆಯ ಖರ್ಚನ್ನು ಕೋತೆಮೂಡಿದ್ದೇ ಆದರೆ ಇಲ್ಲಿಯ ಬಡ್ಜೆಟ್ಟನ್ನು ಸರಿಗಟ್ಟಲು ಮಾತ್ರವಲ್ಲ; ಇಲ್ಲಿ ಪೂರ್ಣ ಜವಾಬ್ದಾರಿ ಸರಕಾರ ನಡೆಸಲು ಸಾಧ್ಯವಿದೆಯೆಂದೂ, ಇದಕ್ಕಾಗಿ ದೊಡ್ಡ ಪ್ರಾಂತಕ್ಕೆ ಸೇರಿಸುವ ಅವಶ್ಯಕತೆಯೂ ಇಲ್ಲ; ಆದರಿಂದ ಪ್ರಯೋಜನವೂ ಇಲ್ಲವೆಂದೂ ಇನ್ನೊಂದು ಪಕ್ಷದವರು ಚಳವಳವನ್ನು ನಡೆಸಿದರು.

ಈ ಮಧ್ಯೆ ಮಧ್ಯವರ್ತಿ ಸರ್ಕಾರದವರಿಂದ ನೇಮಿಸಲ್ಪಟ್ಟ ಫೈನಾನ್ಸು ಆಫೀಸರವರು ಇಲ್ಲಿಯ ಸರಕಾರದ ಆರ್ಥಿಕ ಸ್ಥಿತಿಯನ್ನು ಅಜಮಾಯಿಸಿ ಮಾಡಿದ ಸಿಬ್ಬಂದಿಖೋತೆಯ ಸೂಚನೆಗಳನ್ನು ಸರಕಾರದವರು ಈಗೆ ಜಾರಿಗೆ ತಂದದರ ಫಲಿತಾಂಶವಾಗಿ ಕೊಡಗಿನ ಬಡ್ಜೆಟ್ಟನ್ನು ಸರಿಗಟ್ಟಲು ಸಾಧ್ಯವಾಗಿದೆ. ಎಂಬ ವಿಚಾರ ಕಳೆದ ವಾರ ಬರೆಯಲ್ಪಟ್ಟಿತ್ತು. ಅದ ಕಾರಣ ಹಣದ ಅಭಾವದ ಮಾತು ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಲಿಕ್ಕಾಗಲೀ, ಕೊಡಗಿಗೆ ಸಂಪೂರ್ಣ ಜವಾಬ್ದಾರಿ ಸರಕಾರ ಕೊಡಲಿಕ್ಕಾಗಲೀ ಅಡ್ಡಿ ಬರುವಂತಿಲ್ಲವೆಂಬುದು ಸ್ಪಷ್ಟವಾಗಿದೆ. ದಿನ ಚರ್ಯೆಯ ಆಡಳಿತ ಖರ್ಚಿಗೆ ಹಣವಿದ್ದರೂ ಕೂಡ ರಾಷ್ಟ್ರಾಭಿವೃದ್ಧಿಯ ಕಾರ್ಯಗಳಿಗೆ ಹಣವು ಬೇಕಾಗಿದೆ; ಆದಕ್ಕಾಗಿ ಮಧ್ಯವರ್ತಿ ಸರಕಾರದ ಸಹಾಯವನ್ನು ಪಡೆಯಬೇಕೆಂದೂ ಹಾಗೆ ಪಡೆಯಲು ಕೊಡಗಿಗೆ ಸಾಕಷ್ಟು ಹಕ್ಕಿದೆಯೆಂದೂ ಹಿಂದಿನ ವಾರದ ಲೇಖನದಲ್ಲಿ ಸೂಚಿಸಲಾಗಿತ್ತು. ಅಲ್ಲದೆ ಜವಾಬ್ದಾರಿ ಸರಕಾರವು ದೊರೆತ ಮೇಲೆ ಇನ್ನೂ ಖರ್ಚು ಖೋತೆಮಾಡುವ ಅವಕಾಶವು ಇರಬಹುದು. ಹೇಗೂ ಕೊಡಗಿಗೆ ಜವಾಬ್ದಾರಿ ಸರಕಾರವನ್ನು ಕೊಡದೆ ಬಾಕಿ ಮೂಡಲು ಸರಕಾರದವರಿಗೆ ಇನ್ನು ಮುಂದೆ ಯಾವ ನ್ಯಾಯವಾದ ಕಾರಣವೂ ಇರುವುದಿಲ್ಲ. ದೇಶೀಯರು ಈ ವಿಚಾರದಲ್ಲಿ ಕಾದು ಕಾದು ಬೇಸತ್ತಿರುವರು. ಜನಸಮುದಾಯದಲ್ಲಿ ದಿನೇದಿನೇ ಅತೃಪ್ತಿಯೂ, ಅಸಮಾಧಾನವೂ ಹೆಚ್ಚುತ್ತಿದೆ. ಯುವಕ ಪಂಗಡದಲ್ಲಿ ಅಸಮಾಧಾನವು ಮಿತಿಮೀರುವ ಚಿಹ್ನೆಗಳೂ ಕಂಡುಬರುತ್ತಿವೆ. ಹಿಂದೂಸ್ಥಾನದ ರಾಜಕೀಯ ವಾತಾವರಣವು ಈ ಪರಿಸ್ಥಿತಿಗೆ ಉತ್ತೇಜನಕೊಡುತ್ತಿದೆ. ಸರಕಾರದವರು ಈಗಿನ ಜನಸಮುದಾಯದ ನಿಜವಾದ ಮನಸ್ತೋಭಿಪ್ರಾಯವನ್ನು ಅರಿತುಕೊಂಡು ಅವನ್ನು ತೃಪ್ತಿಪಡಿಸಲು ಯತ್ನಿಸದಿದ್ದರೆ ಮುಂದೆ ಉಂಟಾಗಬಹುದಾದ ವಿಶೇಷ ಪರಿಸ್ಥಿತಿಗೆ ಅವರೇ ಕಾರಣಭೂತರಾಗುವರು. ಸ್ವಾತಂತ್ರ್ಯಕ್ಕಾಗಿ ಜನರಲ್ಲಿ ಉಕ್ಕಿ ಹೊರಸೂಸುತ್ತಿರುವ ಉತ್ಸಾಹವನ್ನು ತಡೆಯಲು ಯಾರಿಗೂ ಸಾಧ್ಯವಾಗಲಾರದು. ಒಂದಲ್ಲ ಒಂದಿದನ ಅದು ಕಾರ್ಯರೂಪಗೊಂಡು ಫಲಿತಾಂಶವನ್ನು ಪಡೆಯದಿರದು. ಆದ್ದರಿಂದ ಸರಕಾರದವರು ದೇಶೀಯರ ಹುಟ್ಟು ಹಕ್ಕಾದ ಪೂರ್ಣ ಜವಾಬ್ದಾರಿ ಸರಕಾರವನ್ನು ಕೊಡಲು ಶೀಘ್ರದಲ್ಲೇ ತಕ್ಕ ಏರ್ಪಾಡು ಮಾಡಿ ದೇಶದಲ್ಲಿ ಹಬ್ಬುತ್ತಿರುವ ಅಸಮಾಧಾನವನ್ನು ನೀಗುವರಾಗಿ ನಂಬುತ್ತೇವೆ.

ಕೇಕ್ಸ್‌ಟನ್ ಹಾಲ್‌ನಲ್ಲಿ ಹತ್ಯಾಕಾಂಡ.

ಸರ್. ಮೈಕೇಲ್ ಒಡ್ವಯರರ ಕೊಲೆ!

ಉದ್ಧಾಮ ಸಿಂಗನ ಸೆರೆ.

ಲಂಡನಿನ ಕೇಕ್ಸ್‌ಟನ್ ಹಾಲ್‌ನಲ್ಲಿ ತಾರೀಕು 13 ರಲ್ಲಿ ಒಂದು ಖಾಸಗಿ ಸಭೆಯು ನೆರೆದಿತ್ತು. ಲಂಡನಿನ ಆಢ್ಯಮಹನೀಯರು ನೆರೆದಿದ್ದರು. ಅನೇಕ ಪತ್ರಿಕಾ ಪ್ರತಿನಿಧಿಗಳೂ, ಪ್ರೇಕ್ಷಕರೂ ನೆರೆದಿದ್ದರು. ಅವರಲ್ಲಿ ಉದ್ಧಾಮಸಿಂಗನೆಂಬ ಹಿಂದೀಯನು ಪತ್ರಿಕಾ ಪ್ರತಿನಿಧಿಯಂತೆ ನಟಿಸಿ ಹಾಲ್‌ನೊಳಗೆ ಪ್ರವೇಶಿಸಿದನು. ಮಿಟಿಂಗು ನಡೆಯುತ್ತಿದ್ದಂತೆ ತಮ್ಮ ಭಾಷಣ ಮಾಡಲು ಸರ್ ಮೈಕೇಲ್ ಒಡ್ವಯರರು ಭಾಷಣವೇದಿಕೆಗೆ ಬಂದರು. ಆ ಸಮಯದಲ್ಲಿ ಹಾಲ್‌ನ ಕೊನೆಯಲ್ಲಿ ನಿಂತಿದ್ದ ಈ ಉದ್ಧಾಮಸಿಂಗ್ ಎಂಬ ಯುವಕನು ತನ್ನೊಳಗೆ ಅಡಗಿಸಿಟ್ಟಿದ್ದ ಪಿಸ್ತೂಲನ್ನು ತೆಗೆದುಕೊಂಡು 'ದಾರಿಬಿಡಿ, ದಾರಿಬಿಡಿ' ಎಂದು ಕೂಗಿಕೊಂಡು ಮುಂದಕ್ಕೆ ಬಂದು ಸರ್ ಒಡ್ವಯರರಿಗೆ ಎರಡು ಗುಂಡುಗಳನ್ನು ಹಾರಿಸಿದನು. ಇದರಿಂದ ಅವರು ಕೆಳಗೆ ಬಿದ್ದು ಮೃತರಾದರು. ನಂತರ ಯುವಕನು ಇಂಡಿಯಾ ಸೆಕ್ರೆಟರಿಯವರಾದ ಲಾರ್ಡ್ ಜೆಟ್ಲೆಂಡರವರಿಗೂ, ಪಂಜಾಬದ ಗವರ್ನರಾಗಿದ್ದ ಸರ್ ಲೂಯಿಡೆನ್‌ರಿಗೂ, ಬೊಂಬಾಯಿ ಪ್ರಾಂತದ ಗವರ್ನರಾಗಿದ್ದ ಲಾರ್ಡ್ ಲ್ಯಾಮಿಂಗ್‌ಟನ್‌ರವರಿಗೂ ಗುಂಡು ಹಾರಿಸಿದನು. ಇವರೆಲ್ಲರಿಗೂ ಘಾಯಗಳಾದರೂ ಅದೃಷ್ಟವಶಾತ್ ಮೃತ್ಯುವಿಂದ ಪಾರಾಗಿರುವರು. ಇವರುಗಳೆಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಭಾರತ ಸೆಕ್ರೆಟರಿಗಳಾದ ಲಾರ್ಡ್ ಜೆಟ್ಲೆಂಡರವರು ಚಿಕಿತ್ಸೆ ಹೊಂದಿ ತನ್ನ ಕಾರ್ಯಕ್ಕೆ ಹಾಜರಾಗಿರುವರು. ಈ ಅತ್ಯಾಚಾರದ ಸಂಬಂಧ ಉದ್ಧಾಮಸಿಂಗ್ ಎಂಬ ಭಾರತೀಯನನ್ನು ದಸ್ತಗಿರಿ ಮಾಡಿರುವರಂತೆ. 1919 ರಲ್ಲಿ ಅಮೃತಸರದಲ್ಲಿ ನಡೆದ ಹತ್ಯಾಕಾಂಡದ ಸಂದರ್ಭದಲ್ಲಿ ಆಗ ಪಂಜಾಬಿನ ಗವರ್ನರರಾಗಿದ್ದ ಈ ಸರ್ ಮೈಕೇಲ್ ಒಡ್ವಯರವರು ಈ ಉದ್ಧಾಮ ಸಿಂಗನ ಸಹೋದರನ ಮರಣಕ್ಕೆ ಕಾರಣರಾದರೆಂದೂ ಆದ ಪ್ರಯುಕ್ತ ಈ ರೀತಿ ಆತನು ಸೇಡು ತೀರಿಸಿಕೊಂಡಿರುವನೆಂದೂ ಊಹಾ ಪೋಹಗಳು ಹೊರಟಿವೆ. ಆತನು ಲಂಡನ್ ನಗರಕ್ಕೆ ತೀರ ಹೊಸಬನೆಂದೂ ಅಲ್ಲಿರುವ ಯಾವ ಹಿಂದೀಯನಿಗೂ ಈತನ ಗುರುತ್ತಿಲ್ಲವೆಂದೂ, ಈತನು ಆರು ತಿಂಗಳ ಮೊದಲೇ ಇಂಗ್ಲೆಂಡಿಗೆ ಹೋಗಿ ಅಲ್ಲಿಯ ಹಳ್ಳಿಗಳಲ್ಲಿದ್ದು ನಗರಕ್ಕೆ ಪ್ರಥಮತಃ ತಾ. 13 ರಲ್ಲೇ ಬಂದಿರುವದೆಂದೂ ಊಹಿಸಲಾಗಿದೆಯಂತೆ. ಆರೋಪಿಯು ಸಂತೋಷದಿಂದಿರುವುದಾಗಿ ತಿಳಿದು ಬಂದಿದೆ. ಅವನ ವಿಚಾರಣೆಯು ಬರುವ ತಿಂಗಳ ಪ್ರಥಮದಲ್ಲಿ ನಡೆಯುವದೆಂದು ತಿಳಿಯುತ್ತದೆ.

ಹಿಂದೀಯರ ಅನುತಾಪ.

ಕೊಲೆಯ ವಿಚಾರದಲ್ಲಿ ಮಹಾತ್ಮ ಗಾಂಧಿಯವರು ತಮ್ಮ ಅನುತಾಪವನ್ನು ವ್ಯಕ್ತಪಡಿಸುತ್ತಾ ಈ ಅತ್ಯಾಚಾರವು ಹುಚ್ಚನ ಹುಚ್ಚುತನವೆಂದೂ, ಇದರಿಂದ ಯಾವ ಉದ್ದೇಶವೂ ಸಾಧಿಸದೆಂದೂ, ಇದರಿಂದ ರಾಜಕೀಯ ವಿಚಾರದಲ್ಲಿ ಯಾವುದೇ ವಿಧದ ವ್ಯತ್ಯಾಸವಾಗಲಿಕ್ಕಿಲ್ಲವೆಂದೂ ಹೇಳಿರುವರು. ಪಂಡಿತ ಜವಾಹರ್‌ಲಾಲ್, ಬಾಲಗಂಗಾಧರ ಖೇರ್, ಅಲ್ಲದೆ ರಾಷ್ಟ್ರಪತಿಗಳಾಗಿದ್ದ ರಾಜೇಂದ್ರ ಪ್ರಸಾದ್ ಮೊದಲಾದ ರಾಜಕೀಯ ಮುಖಂಡರೂ, ಇಂಗ್ಲೆಂಡಿನಲ್ಲಿರುವ ಎಲ್ಲಾ ಹಿಂದೀಯ ಸಂಸ್ಥೆಗಳೂ, ಬಂಗಾಲ, ಮಧ್ಯ ಸರಕಾರ ಎಸೆಂಬ್ಲಿಗಳೂ ತಮ್ಮ ನಿಶೇಧವನ್ನು ವ್ಯಕ್ತಪಡಿಸಿವೆ. ರಾಮಘರ ಕಾಂಗ್ರೆಸಿನಲ್ಲಿ ಸೇರಿದ ಕಾಂಗ್ರೆಸ್ ಅಧಿಕಾರಿ ಪುಂಡಳೆಯಾದರೂ ಮಹಾತ್ಮರ ಪ್ರೇರಣೆಯಂತೆ ಈ ಬಗ್ಗೆ ತಮ್ಮ ಅನುತಾಪವನ್ನು ಸೂಚಿಸುವ ಒಂದು ತರಾವನ್ನು ಪಾಸು ಮಾಡಿರುವರು. ಈ ಕೊಲೆಯಿಂದಾಗಿ ಭಾರತದ ಅಹಿಂಸಾ ಯುದ್ಧವಾದ ಸ್ವಾತಂತ್ರ್ಯ ಹೋರಾಟವು ಕಳೆಗುಂದಿದೆಯೆಂದು ಕೆಲವರು ಅಭಿಪ್ರಾಯ ವ್ಯಕ್ತ ಮಾಡಿರುವರು.

ಕಾಂಗ್ರೆಸ್ ಬಹಿರಂಗ ಅಧಿವೇಶನ.

ತಾರೀಕು 19 ರಲ್ಲಿ ನಡೆಯಬೇಕಿದ್ದ ಈ ಬಹಿರಂಗ ಅಧಿವೇಶನವು ಮಳೆಯ ತೊಂದರೆಯಿಂದಾಗಿ ಒಂದು ದಿನ ಮುಂದರಿಸಲ್ಪಡಬೇಕಾಯಿತು. ತಾರೀಕು 20 ರಲ್ಲಿ ಅದಿವೇಶನವು ನಡೆಯಿತು. ವಿಷಯನಿಯಾಮಕ ಸಭೆಯಲ್ಲಿ ಪಾಸಾದ ಯುದ್ಧ ಘೋರಣೆಯ ಹಾಗೂ, ಭಾರತದ ಮುಂದಿನ ಧ್ಯೇಯದ ತರಾವನ್ನು ಅಂಗೀಕರಿಸಲಾಯಿತು. ಮಹಾತ್ಮ ಗಾಂಧಿಯವರು ಭೋಧಪ್ರದವಾದ ಭಾಷಣವನ್ನು ಮಾಡಿದರು. ಇದರ ವಿವರವಾದ ವಿಚಾರ ಮುಂದಿನ ವಾರ ಪ್ರಕಟಿಸಲ್ಪಡುವದು.

ವರ್ತಮಾನ ಸಂಗ್ರಹ.

ಒಳದೇಶ.

ಈಸ್ಟರ್ ಹಬ್ಬದ ಬಗ್ಗೆ ಸರ್ಕಾರ ತಾ. 22ರಿಂದ 25ರ ವರೆಗೆ ಬ್ಯಾಂಕುಗಳಿಗೆ ನಾಲ್ಕು ದಿನಗಳ ರಜೆ ಇರುವದು.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 170ರ ವರೆಗೂ ಏಲಕ್ಕಿ ಮಣಕ್ಕೆ ರೂ. 30ರ ವರೆಗೂ ಕ್ರಯವಿದೆ.

ಸಹಕಾರಿ ಇನ್ಸ್‌ಪೆಕ್ಟರುಗಳಿಗೂ ಮತ್ತು ಸುಪರ್‌ವೈಜರುಗಳಿಗೂ ಸಹಕಾರದ ವಿಚಾರ ಪುನರ್ಮನರ್ಶೆಯ ತರಬೇತು ಬರುವ ತಾ. 3ರಿಂದ 14ರ ವರೆಗೆ ಇಲ್ಲಿ ನಡೆಯುವದು.

ಚೀಫ್ ಕಮಿಷನರು ಕೌನ್ಸಿಲ್ ವಿಾಟಿಂಗು ಮುಗಿಸಿಕೊಂಡು ತಾ. 17ರಲ್ಲಿ ಬೆಂಗಳೂರಿಗೆ ವಾಪಸು ಹೋದರು.

ಕೊಡಗು ರೆಡ್‌ಕ್ರಾಸ್ ಸಂಘದ ಮಡಿಕೇರಿ ಶಾಖೆಯಲ್ಲಿ ಈ ವಾರ ಯುದ್ಧ ಹಾಗೂ ಸೆಂಟ್ ಡನ್‌ಸ್ಟನ್ ಫಂಡಿಗಾಗಿ 133 ರೂ. ಜಮೆಯಾಗಿದೆ.

ವೀರಾಜಪೇಟೆ

ಇಲ್ಲಿಯ ಜಾನುವಾರುಗಳ ಜಾತ್ರೆಯು ತಾರೀಕು 16ರಿಂದ 19ರ ವರೆಗೆ ಜಯಪ್ರದವಾಗಿ ನಡೆಯಿತು.

ತಲಿಚೇರಿ ಖಾದಿ ವಸ್ತ್ರಾಲಯದವರು ಖಾದಿ ಬಟ್ಟೆಯನ್ನು ವಿಕ್ರಯಿಸಲು ವೀರಾಜಪೇಟೆಗೆ ತಾ. 13-3-40ರಲ್ಲಿ ಬಂದಿರುವರೆಂದು ತಿಳಿದುಬರುತ್ತದೆ.

ಇಲ್ಲಿ ಕಳೆದವಾರ ನಡೆದ ನ್ಯೂ ವಿಕ್ಟೋರಿಯಾ ಬೇಡ್‌ಮೆಂಟನ, ಆಶ್ರಯದಲ್ಲಿ ನಡೆದ ಟೂರ್ನಮೆಂಟಿನ ಕಡೆಯ ಆಟವು ನ್ಯೂ ವಿಕ್ಟೋರಿಯಾ ಟೀಮಿಗೂ, ಹೈಸ್ಕೂಲ್ ಟೀಮಿಗೂ ನಡೆದು ನ್ಯೂ ವಿಕ್ಟೋರಿಯ ಟೀಮಿನವರು ಹೈಸ್ಕೂಲ್ ಟೀಮಿನವರನ್ನು ಸೋಲಿಸಿ ಕಪ್ಪನ್ನು ಪಡೆದರೆಂದು ತಿಳಿದುಬರುತ್ತದೆ.

ಬೇಶರ.

ಇಲ್ಲಿ ಕಳೆದ ವರ್ಷ ನಡೆದಂತೆಯೇ ತಾರೀಕು 23ರಿಂದ ನಾಲ್ಕು ದಿನಗಳ ವರೆಗೆ ಜಾತ್ರೆ ನಡೆಯಿವದೆಂದೂ, ಪೂಜೆ ಪುನಸ್ಕಾರಗಳೂ, ದನಗಳ ಪ್ರದರ್ಶನವೂ ನಡೆಯುವದೆಂದೂ ತಿಳಿದು ಬರುತ್ತದೆ.

ಮೂರ್ನಾಡು

ಆದಿ ಶ್ರೀ ಕಾವೇರಿ ಬಸ್ ಸರ್ವಿಸಿನ ಇನ್ನೊಂದು ಲೈನು ತಾರೀಕು 13-3-40ರಿಂದ ಮಡಿಕೇರಿ-ಮೂರ್ನಾಡು-ವೀರಾಜಪೇಟೆ ಮಾರ್ಗದಲ್ಲಿ ಓಡಾಡಲು ಪ್ರಾರಂಭವಾಗಿದೆ. (ಈ ಲೈನಿನ ವಿಚಾರ ಒಂದು ಬಾತ್ಮಿ ಬಂದಿದೆ. ಸ್ಥಳಾಭಾವದಿಂದ ಈ ವಾರ ಪ್ರಕಟಿಸಲಾಗಲಿಲ್ಲ.)

ಸೋಮವಾರಪೇಟೆ.

ಇಲ್ಲಿ ಹಾಗೂ ತೊರೆನೂರಿನಲ್ಲಿ ಪ್ಲೇಗು ರೋಗ ಅಂಟಿದೆಯೂಗಿಯೂ, ಅದನ್ನು ನಿವಾರಿಸುವ ಪ್ರಚಂಡ ಪ್ರಯತ್ನಗಳಾಗುತ್ತಿವೆಯೆಂದೂ ತಿಳಿಯಬರುತ್ತದೆ.

ಶನಿವಾರಸಂತೆ.

ತಾ. 15-3-40ನೇ ಬುಧವಾರ ರಾತ್ರಿ 9 ಘಂಟೆ ಸಮಯದಲ್ಲಿ ಬಾಣವಾರಕ್ಕೆ ಹೋಗುವ ರಸ್ತೆ ಸಮೀಪ ಗ್ರಾಮವಾದ ಮೂಲಂಬಿ ಹತ್ತಿರ ಶ್ರೀಯುತ ಮುಂಡಿಯೋಳಂಡ ಕುಞಪ್ಪನವರು (ಕಾರಗೋಡು ಫಾರಸ್ಟರು) ಒಂದು ದೊಡ್ಡ ಹೆಬ್ಬುಲಿಯನ್ನು ಗುಂಡು ಹೊಡದು ಕೊಂದಿದ್ದಾರೆ. ಇವರ ಹಾಗೂ ಈ ಹುಲಿಯ ಮೆರವಣಿಗೆ ತಾ. 16ರಲ್ಲಿ ಶನಿವಾರಸಂತೆ ಪೇಟೆಯಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿತು. ಈ ವರೆಗೆ ಈ ಮಹನೀಯರು 4 ಹುಲಿಗಳನ್ನು ಕೊಂದಿದ್ದಾರಂತೆ.

ನಿಧನ ವಾರ್ತೆ.

ತಾರೀಕು 15-3-40ರಲ್ಲಿ ಅಮ್ಮತ್ತಿ ಗ್ರಾಮದ ಶ್ರೀ ಮಾಚಿಮಾಡ ಅಪ್ಪಚ್ಚನವರ ಪತ್ನಿ ತಂಗವ್ವನವರು ತಮ್ಮ 79ನೇ ವಯಸ್ಸಿನಲ್ಲೂ, ತಾ. 20ರಲ್ಲಿ ರಿಟಯರ್ಡ್ ಪಾರುಪತ್ಯಗಾರರಾಗಿ ಮಡಿಕೇರಿಯಲ್ಲಿದ್ದ ಶ್ರೀ ಮಂಡೇಪಂಡ ಅಪ್ಪಚ್ಚನವರೂ ಸ್ವರ್ಗಸ್ಥರಾದರೆಂದು ತಿಳಿಯುತ್ತೇವೆ.

ಹಿಂದೂದೇಶ.

ದಾಲ್ಮಿಯ ನಗರದಲ್ಲಿನ ಮುಷ್ಕರದ ಸಂಬಂಧ ಶ್ರೀ. ಎಚ್. ರಹಮೂನ್ ಮತ್ತು 20 ಮಂದಿಯನ್ನು ಕೈದು ಮಾಡಿರುವರು.

ಶಿವಮೊಗ್ಗದಲ್ಲಿ ನಡೆಯುತ್ತಿರುವ ಮೈಸೂರು ಕಾಂಗ್ರೆಸ್ ತೃತೀಯ ಅಧಿವೇಶನದ ಅಧ್ಯಕ್ಷರ ಸ್ಥಾನಕ್ಕೆ ಶ್ರೀ. ಕೆ. ಟಿ. ಭಾಷ್ಯಂ ಐಯ್ಯಂಗಾರವರ ಹೆಸರನ್ನು ಸೂಚಿಸಲಾಗಿದೆ.

ಲಾಹೋರಿನಲ್ಲಿ ಕಾರ್ಕ್‌ಸಾರರಿಗೂ, ಪೊಲೀಸಿನವರಿಗೂ ತಿಕ್ಕಾಟ ನಡೆದು ಪೊಲೀಸರು ಗುಂಡು ಹಾರಿಸಬೇಕಾಗಿ ಬಂತು. ಆ ಪ್ರಯುಕ್ತ 28 ಜನರು ಮೃತರಾದರಲ್ಲದೆ 39 ಜನರಿಗೆ ಜಖಂ ಆಗಿದೆ.

ಬರುವ ವರ್ಷದ ಕಾಂಗ್ರೆಸ್ ಅಧಿವೇಶನವನ್ನು ತಮ್ಮ ಪ್ರಾಂತದಲ್ಲಿ ನಡೆಸಬೇಕೆಂದು ಮದ್ರಾಸ್, ಗಡೀನಾಡು, ಪಂಜಾಬು, ಸಂಯುಕ್ತ ಪ್ರಾಂತದವರು ಆಹ್ವಾನಿಸಿರುವರು. ಈ ಬಗ್ಗೆ ತೀರ್ಮಾನ ಮಾಡಲು ವರ್ಕಿಂಗ್ ಕಮಿಟಿಗೆ ಅಧಿಕಾರ ಕೊಡಲಾಗಿದೆ.

ಮೈಸೂರು ಹೈಕೋರ್ಟಿನವರು ಶ್ರೀಗಳಾದ ಕೆ. ಟಿ. ಭಾಷ್ಯಂ, ಸಂಪಂಗಿರಾಮಯ್ಯ, ಪಟ್ಟಾಭಿರಾಮನ್, ರಾಮಾಚಾರ್‌ರವರ ಹೆಸರುಗಳನ್ನು ವಕೀಲರ ಪಟ್ಟಿಯಿಂದ ಹೊಡೆದು ಹಾಕಿ, ಇನ್ನು ಮುಂದೆ ಸಂಸ್ಥಾನದ ಯಾವ ಕೋರ್ಟಿನಲ್ಲೂ ವಕಾಲತ್ತನ್ನು ನಡಿಸಕೂಡದೆಂದು ಆರ್ಡರು ಮಾಡಿದ್ದಾರೆ.

ಬೊಂಬಾಯಿ ಮಿಲ್ಲಿನ ಮೂಲಕರ್ತು ಮುಷ್ಕರ ಹಿಡಿದ ಕೆಲಸಕಾರರಿಗೆ ಈ ಯುದ್ಧ ಕಾಲದಲ್ಲಿ ತಾವು ಯಾವ ನಿರ್ದಿಷ್ಟವಾದ ಭರವಸೆಯನ್ನೂ ಕೊಡಲಾರೆವೆಂದಿದ್ದಾರೆ. ಮುಷ್ಕರವನ್ನು ಬಗೆ ಹರಿಸಲೆತ್ನಿಸಿದ ಬೊಂಬಾಯಿಯ ಕಾರ್ಪರೇಷನ್ ಮೇಯರರ ಪ್ರಯತ್ನಗಳೆಲ್ಲ ವಿಫಲವಾಗಿದೆ.

ಕಾಲೇಜು ಕ್ಲಾಸುಗಳಿಗೆ ಪ್ರವೇಶ ದೊರಕಿಸಿ ಕೊಡಲಿರುವ ಮೆಟ್ರಿಕ್ಯುಲೇಶನ್ ಪರೀಕ್ಷೆಯೊಂದು ಹೊಸದಾಗಿ ಮದ್ರಾಸಿನಲ್ಲಿ ಏರ್ಪಡಲಿದೆ. ಇದು 1943ರಿಂದ ಜಾರಿಗೆ ಬರುವುದಾದರೂ ಬರುವ ವರ್ಷದಿಂದ ನಾಲ್ಕನೆಯ ಫಾರ್ಮಿನಲ್ಲಿ ಇವರ ಪೀಠಿಕೆಯಾಗಿದೆ. ಸೆಕೆಂಡರಿ ಶಿಕ್ಷಣದಲ್ಲಿ ಇದೊಂದು ಹೊಸ ಬದಲಾವಣೆ.

ಈ ವರ್ಷದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಗೆ ಈ ಕೆಳಗಿನ ಹೆಸರುಗಳನ್ನು ರಾಷ್ಟ್ರಪತಿಗಳು ಆರಿಸಿರುವರು. ಶ್ರೀಗಳಾ ಪಂಡಿತ ಜವಾಹರಲಾಲ್‌ನೆಹರೂ, ಜಮ್ನಾಲಾಲ್‌ಬಜಾಜ್, ಕೃಪಾಲಿನಿ, ಬುಲಾಭಾಯಿ ದೇಸಾಯಿ, ಸಿ. ರಾಜಗೋಪಾಲಚಾರಿ. ಅಸಾಫ್ ಆಲಿ, ಸರೋಜಿನಿ ನಾಯಡು, ರಾಜೇಂದ್ರಪ್ರಸಾದ್, ಆಬ್ದುಲ್ ಗಫೂರ್‌ಖಾನ್, ಪಿ. ಸಿ. ಘೋಷ್, ಶಂಕರರಾವ್‌ದೇವ್, ಸಯ್ಯದ್ ಮಹಮ್ಮದ್, ಸರ್ದಾರ್ ಪಟೇಲ್.

ಸಿಂಧ್ ಪ್ರಾಂತದ ಮಂತ್ರಿ ಮಂಡಳ ಪಿಲ್ಲಿ ಪುನಃ ಗಡಿಬಿಡಿಯುಂಟಾಗಿದೆ. ಅಲ್ಲಿನ ಎಸೆಂಬ್ಲಿಯಲ್ಲಿ ಬಜೆಟ್ ಅಧಿವೇಶನ ಕಾಲದಲ್ಲಿ ಮಂತ್ರಿಮಂಡಳದ ಕೇಳಿಕೆಯನ್ನು, ಆ ಸಭಾ ಮಂದಿರದ ಬಹು ಸಂಖ್ಯಾಕರು ತಿರಸ್ಕರಿಸಿದ ಕಾರಣ, ಪ್ರಧಾನರಾದ ಶ್ರೀ ಅಲ್ಲಾಬಕ್ಸರು, ಮುಂದಿನ ಕೇಳಿಕೆಗಳನ್ನು ಪುಂಡಿಸಿಬೆ, ಎಸೆಂಬ್ಲಿಯು ಮೊಟಂಗನ್ನು ಕಾಲ ನಿರ್ಧಾರವಿಲ್ಲದಂತೆ, ಮುಂದರಿಸಿದರು. ಈಗ ಇನ್ನೊಂದು ಮಂತ್ರಿಮಂಡಳದ ರಚನೆಯ ಏರ್ಪಾಡಿಗಾಗಿ, ಅಲ್ಲಿನ ಗವರ್ನರರು, ಎದುರು ಪಕ್ಷದ ಮುಖಂಡರಾದ ಬುಂಡೇ ಆಲೀ ಖಾನ್‌ರವರನ್ನು ಕರೆಸಿಕೊಂಡು ಮಾತಾಡಿದರು. ಅವರು ಮಂಡಲದ ರಚನೆಗೆ ಒಪ್ಪಿರುವರು.

ವಿದೇಶ.

ತುರ್ಕಿ ದೇಶದಲ್ಲಿ ಇತ್ತೀಚೆಗೆ ಸಂಭವಿಸಿದ ಭೂಕಂಪದ ದೆಸೆಯಿಂದ ನೆಲಸಮವಾದ ಊರು ಕೇರಿಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಆ ದೇಶದ ಸರ್ಕಾರದವರು 80 ಸಾವಿರ ಹೊಸ ಮನೆಗಳನ್ನು ಕಟ್ಟುವ ಯೋಚನೆ ಮಾಡಿರುತ್ತಾರೆ.

ರಷ್ಯ-ಫಿನ್ ಲ್ಯಾಂಡಿನ ಒಪ್ಪಂದದ ಪರಿಣಾಮವಾಗಿ ಫಿನ್‌ಲೆಂಡಿನ 10 ಲಕ್ಷ ಮಂದಿ ಪ್ರಜೆಗಳು ಕೆಲ ಭಾಗಗಳಿಂದ ಹೊರಡಬೇಕಾಗಿದೆ. ಹಲವು ಮಂದಿ ಪ್ರಜೆಗಳು ಊರು ಬಿಟ್ಟಿದ್ದವರು ಈಗ ಸ್ವಗೃಹಗಳಿಗೆ ಹಿಂದಿರುಗುತ್ತಲಿದ್ದಾರೆ.

ಈ ವರ್ಷದ ಆಂತ್ಯದೊಳಗಾಗಿ ಪಶ್ಚಿಮ ರಣರಂಗದ ವಿಚಾರದ ಕುರಿತು ಒಂದು ತೀರ್ಮಾನಕ್ಕೆ ಬರುವಂತೆ ಹಿಟ್ಲರ್ ಪ್ರಬಲವಾದ ಯುದ್ಧ ಸಿದ್ಧತೆ ಮಾಡುತ್ತಿರುವದಾಗಿ ಸುದ್ದಿ.

ರಷ್ಯಾ ರುಮೇನಿಯಾ ದೇಶಗಳೊಳಗೆ ಒಂದು ಸಂಧಾನದ ಕರಾರು ಆಗಬಹುದೆಂಬ ಪ್ರಬಲ ವಾರ್ತೆ ಹರಡಿದೆ.

ಫಿನ್‌ಲೆಂಡಿನ ಕೈಗೊಂಬೆ ಸರಕಾರದ ಮುಖ್ಯಾಧಿಕಾರಿಯಾದ ಒಟ್ಟೊ ಕುಶ್ಯಿನ್ ಇನ್ನೆನನ್ನು ಹೆಲ್ಸಿಂಕಿಯಲ್ಲಿ ವಧಿಸಿರುವರಾಗಿ ಸುದ್ದಿ ಹರಡಿದೆ. ಯುದ್ಧಕ್ಕೆ ಪೂರ್ವದಲ್ಲಿ ಈತನು ಫಿನ್‌ಲೆಂಡಿನ ಕುರಿತು ತಪ್ಪು ಗ್ರಹಿಕೆಗೆ ಆಸ್ಪದ ಕೊಡುವ ಸುದ್ದಿಗಳನ್ನು ರಷ್ಯದವರಿಗೆ ಕೊಟ್ಟದ್ದನೆಂದೂ, ಆದರಿಂದ ಕೋಪಗೊಂಡ ಸ್ಟಾಲೀನನೇ ಈ ಪಟ್ಟೆಗೆ ಅಸ್ಪಣೆ ನೂಡಿದನೆಂದೂ ಪ್ರಕಟವಾಗಿದೆ.

ಫಿನ್‌ಲೆಂಡಿನ ಒಟ್ಟು ವಿಸ್ತೀರ್ಣವಾದ 150, 000 ಚಚ್ಚೌಕ ಮೈಲುಗಳಲ್ಲಿ ಹತ್ತನೇ ಒಂದಂಶವು ಈಗ ಕೈತಪ್ಪಿ ಹೋಯಿತೆಂದು ತಿಳಿದುಬರುತ್ತಿದೆ.

ಜಪಾನು ಚೀನದ ಸ್ವಾತಂತ್ರ್ಯವನ್ನು ಮನ್ನಿಸುವದು. ಆದರೆ ಮಾರ್ಷಲ್ ಚಾಂಗ್-ಕೈ-ಷೇಕರ ಸರಕಾರದ ಮೇಲಿನ ಚಳವಳವನ್ನು ಬಿಡಲಾರದು.' ಹೀಗೆಂದು ಜಪಾನಿನ ಪ್ರಧಾನರ ಹೇಳಿಕೆ.

ಯುದ್ಧ ಮತ್ತು ರಾಜಿಯ ಪರಿಣಾಮವಾಗಿ ಫಿನ್‌ಲೆಂಡಿನ 4 ಲಕ್ಷ ಮಂದಿ ಮನೆಮಠಗಳನ್ನು ಕಳೆದುಕೊಂಡ ಅನಾಥರಾಗಿರುತ್ತಾರೆ.

ಇಲ್ಲಿ 10 ಲಕ್ಷ ಮಂದಿ ತರುಣರ ಸೈನ್ಯವೊಂದು ಯಾವಾಗಲೂ ಯುದ್ಧಕ್ಕೆ ಸಿದ್ಧವಾಗಿದೆ ಎಂದು ಆಲ್ಲಿನ ಯುದ್ಧದ ಆಂಡರ್ ಸ್ಟೇಟ್ ಸೆಕ್ರಟರಿಗಳ ಹೇಳಿಕೆ. ಸದ್ಯ ರೋಮಿನಲ್ಲಿ ಯಾತ್ರಿ ಗೇಟುಗಳ ಕಬ್ಬಿಣದ ರೈಲಿಂಗ್ ಹಾಗೂ ಇತರ ಕಬ್ಬಿಣದ ಯೋಗ್ಯ ಸಾಧನಗಳನ್ನು ಸಂಗ್ರಹಿಸುವಂತೆ ರಾಜಾಜ್ಞೆಯಾಗಿದೆ.

ತಾಮ್ರ, ಹಿತ್ತಾಳಿ, ತವರ ಮೊದಲಾದ ಕೆಲ ಕೆಲವು ಲೋಹಗಳನ್ನು, ಆದಷ್ಟು ಮಟ್ಟಿಗೆ ಸಂಗ್ರಹಿಸಿಕೊಡಬೇಕಾಗಿ, ಫೀಲ್ಡ್ ಮಾರ್ಷಲ್ ಜನರಲ್ ಗೋರಿಂಗರು ಜರ್ಮನ್ ಜನಾಂಗಿಕರಲ್ಲಿ ವಿನಂತಿಮಾಡಿಕೊಂಡಿದ್ದಾರೆ. ಎಪ್ರಿಲ್ ತಾ. 20 ಹಿಟ್ಲರ್ ಹುಟ್ಟಿದ ಹಬ್ಬವಾಗಿದ್ದು, ಅಂದು ಈ ಸಂಗ್ರಹಕಾರ್ಯ ನಡೆಯಬೇಕಾಗಿದೆ.

PUBLICATION.

Applications are invited from natives of Coorg (by birth or domicile) up to 1-4-1940 for a temporay vacancy for a post of a draftsman in the office of the Executive Engineer, P. W. D. Mercara. The minimum qualification required of the applicant is that he should have passed the lower Subordinate Examination of the College of Engneering Guindy(Madras University) or an equivalent Examination of the Mysore Engineering Course. The scale of pay is 50-4/2-90.

For further particulars please address the Manager Executive Engineer's office, Mercara.

M. N. KAMATH,
Executive Engineer,
Coorg.

ಕೌನ್ಸಿಲು ಬಡ್ಜೆಟ್ ಮೊಟಂಗು.

ಕಳೆದ ಸಂಚಿಕೆಯಿಂದ ಮುಂದುವರಿದದ್ದು

ಶ್ರೀ ಎಸ್. ಎಸ್. ರಾಮಮೂರ್ತಿಯವರು.

'ನಮ್ಮ ಮುಂದಿರುವ ಬಜ್ಜೆಟ್ಟು ಸ್ವಲ್ಪ ಮಟ್ಟಿಗೆ ನಮಗೆ ತೃಪ್ತಿಯನ್ನುಂಟುಮಾಡುತ್ತಿದೆ. ಕೊಡಗಿನದ್ದು ತಲೆಭಾರ ಸರ್ಕಾರವೆಂದು ಹೆಸರಾಗಿತ್ತು. ಜನತೆಯಾದರೂ ಈ ತಲೆಭಾರ ಸರ್ಕಾರವನ್ನು ನಿಶೇಧಿಸಿ ಆಂದೋಲನ ಎಬ್ಬಿಸಿದ್ದುಂಟು. ಆದರೆ ಈ ಕಳೆದ ಎರಡು ವರ್ಷಗಳಿಂದ ಒಂದು ವಿಧವ ಸಿಬ್ಬಂದಿ ಖೋತೆಯನ್ನು ಜಾರಿಗೆ ತಂದಿರುವರು. ಇದರಿಂದ ಕೊಡಗಿನ ತಲೆಭಾರದ ಖರ್ಚು ಕೆಲವು ಮಟ್ಟಿಗೆ ಕಮ್ಮಿಯಾಗಿದೆ. ಖರ್ಚು ಕಮ್ಮಿ ಮಾಡಲು ಕೈಕೊಂಡ ವಿಧಾನವನ್ನು ದೇಶವಲ್ಲಿ ಹಲವರು ವಿರೋಧಿಸುತ್ತಿರುವರು. ಕೆಳ ತರಗತಿಯ ನೌಕರರನ್ನು ತೆಗೆದು ಹಾಕುವ ಸರ್ಕಾರದ ವಿಧಾನವು ನಿಜವಾಗಿಯೂ ಖಂಡನಾರ್ಹವಾದದ್ದೇ.'

ಶ್ರೀ ಕೆ. ಮಲ್ಲಪ್ಪನವರು.

'ನಮ್ಮ ಮುಂದಿರುವ ಬಜ್ಜೆಟ್ಟನ್ನು ಪರಿಶೀಲಿಸಿದರೆ ಈ ಪ್ರಾಂತದ ಭವಿತವ್ಯವು ಅಂಧಕಾರದಿಂದ ತುಂಬಿರುವಂತೆ ನನಗೆ ಭಾಸವಾಗುತ್ತದೆ. ಕರುಣೆಯಿಲ್ಲದ ಸಿಬ್ಬಂದಿ ಖೋತೆಯಿಂದ ಬಜ್ಜೆಟ್ಟನ್ನು ಸರಿಗಟ್ಟಿರುವರಾಗಿದೆ. ನನ್ನ ಅಭಿಪ್ರಾಯದಲ್ಲಿ ಬಜ್ಜೆಟ್ಟು ಭದ್ರನಾದ ತಳಹದಿಯಲ್ಲಿಲ್ಲವೆಂದು ಕಾಣುತ್ತೆ. ಅನುಭವಸ್ಥರಾದ ಚೀಫ್ ಕಮಿಶನರನ್ನು ವಜ ಮಾಡಿ ಬದಲು ಕೆಳ ದರ್ಜೆಯ ಐ. ಸಿ. ಯಸ್. ಆಫೀಸರನ್ನು ನೇಮಿಸಿಗುವದರಿಂದ ಕರ್ಚು ಕಮ್ಮಿಯಾಗುತ್ತದೇನೋ ನಿಜ. ಆದರೆ ಅದರಷ್ಟೇ ಆಡಳಿತದಲ್ಲಿ ನ್ಯೂನತೆಯುಂಟಾಗುವದು. ನಾಡು ಖಜೇರಿಗಳನ್ನು ವಜ ಮಾಡಿದ್ದು ಕಲವೆಡೆ ರೈತರಿಗೆ ತುಂಬಾ ಕಷ್ಟ ಕೊಡುತ್ತಿದೆ. ಕೊಡಗಿನಲ್ಲಿ ಪಾನ ನಿರೋಧವನ್ನು ತರುವ ಒಗ್ಗೆ ಅನೇಕ ಸಾರಿ ಇಲ್ಲಿ ತರ್ಕ ವಿತರ್ಕಣೆಯಾಗಿದೆ. ಸರ್ಕಾರದವರು ಒಡನೆ ಈ ಒಗ್ಗೆ ಶ್ರಮ ವಹಿಸುವದು ಅಗತ್ಯ. ರೈತಾಪಿ ಜನರ ಹಿತದೃಷ್ಟಿಯಿಂದ ಸರ್ಕಾರವು ಏನೂ ಮಾಡಿರುವದಲ್ಲ. ವ್ಯವಸಾಯಕ್ಕೆ ನೀರು ಸರಬರಾಯಿಯ ಬಗ್ಗೆ ಸರಕಾರವು ಅನಾಸಕ್ತಿಯನ್ನು ತಳೆದಿದೆಯೆಂದರೆ ಅತ್ಯುಕ್ತಿಯಾಗದು. ಈ ಬಜ್ಜೆಟ್ಟು ಕೊಡಗು ಪ್ರತ್ಯೇಕ ಇರಬಹುದೆಂಬ ಸಾಧ್ಯತೆಯನ್ನು ತೋರಿಸುತ್ತವೆಯೆಂದು ಶ್ರೀ ಪಿ. ಐ. ಬೆಳ್ಯಪ್ಪನವರು ಹೇಳಿದರು. ನನ್ನ ಅಭಿಪ್ರಾಯದಲ್ಲಿ ದಿನೇಚರಿ ಖರ್ಚನ್ನೇ ನಿರ್ಬಂಧಿಸುವದು ಇಂದು ಕಷ್ಟವಾಗಿದೆ. ಆಂದಮೇಲೆ ಮುಂದೆ ಜನತೆಯ ಶ್ರೇಯಸ್ಸನ್ನು ಬಯಸುವ ರಾಷ್ಟ್ರಾಭಿವೃದ್ಧಿಯ ಕಾರ್ಯಕಲಾಪಗಳನ್ನು ಕೈಕೊಳ್ಳಲು ಹಣಕ್ಕೆ ತೊಂದರೆ ಇರುವದು. ಮಧ್ಯಸರಕಾರದಿಂದ ಪಂತಿಗೆ ಸಿಗುವದೆಂಬುದು ನಿರಾಧಾರವಿ ವಿಚಾರ. ಒರಿಸಾ, ಸಿಂಧ್, ಈ ಪ್ರಾಂತಗಳಿಗೆ ಎಂಗಿಗೆ ಕೊಡುತ್ತಿರುವದನ್ನು ನಾನು ಒಪ್ಪುತ್ತೇನೆ. ಅವುಗಳ ಸ್ಥಿತಿಯೂ, ನಮ್ಮ ಕೊಡಗಿನ ಸ್ಥಿತಿಯೂ ತೀರಾ ಭಿನ್ನವಾಗಿದೆ. ಮೂರು ವರ್ಷಗಳಿಗೊಮ್ಮೆ ಡಿ. ಜಡ್ಜರು ನಿವೃತ್ತರಾಗುವಂಥ ಸುತ್ತು ಅರ್ಜಿ ಪರ್ತಾಸು ಮಾಡಿ ಶಿಫಾರಸು ಮಾಡಿ, ಆದರೆ ಸರಕಾರ ದಿದ್ದರೆ ನಿವೃತ್ತ ಜ್ಯುಡಿಶ್ಯಲ್ ಹುದ್ದೇದಾರರನ್ನು ನೇಮಿಸಬಹುದೆಂತ ಶ್ರೀ ಪಿ. ಐ. ಬೆಳ್ಯಪ್ಪನವರ ಸೂಚನೆಯನ್ನು ಒಪ್ಪುವದು ಕಷ್ಟ. ಸಾಧಾರಣವಾಗಿ ನಿವೃತ್ತರಾಗುವುದೆಂದರೆ ಕೆಲಸ ಮಾಡಲು ಶಕ್ತಿ ಇಲ್ಲದವರು ಎಂದು ಹೇಳಬಹುದು. ಅಂದಮೇಲೆ ಇಂಥಾ ಕೆಲಸ ಮಾಡಲು ಸಾಧ್ಯವಿಲ್ಲದವರನ್ನು ಡಿ. ಜಡ್ಜರ ಹುದ್ದೆಗೆ ತಂದರೆ ಸರಕಾರ ಹೇಗೆ ನಡೆದೀತು? ಆದ್ದರಿಂದ ಈ ಸೂಚನೆಯು ಒಪ್ಪತಕ್ಕಂಥಾದ್ದಲ್ಲ.'

ಶ್ರೀ ಎನ್. ಸೋಮಣ್ಣನವರು.

'ರಾಜಕೀಯ ಹಾಗೂ ಆರ್ಥಿಕ ತಳಹದಿಯ ಮೇಲೆ ವಿವಿಧ ಅಭಿಪ್ರಾಯಗಳು ಸೂಚಿತವಾಗಿದೆ. ಈ ಬಜ್ಜೆಟ್ಟಿನಲ್ಲಿ ಈ ಪ್ರಾಂತದ ರಾಜಕೀಯ ಭವಿತವ್ಯದ ವಿಚಾರ ಯಾವ ವಿಚಾರವು ನಡೆದಿಲ್ಲ. ಕಾಂಗ್ರೆಸ್ ಪಕ್ಷದವರು ಈ ಬಜ್ಜೆಟ್ಟನ್ನು ಹೊಗಳಿ ಮಾತಾಡುತ್ತಿರುವರು. ಆದರೆ ನಿಜವಾಗಿಯೂ ಈ ಬಜ್ಜೆಟ್ಟು ಯಾವ ಪಕ್ಷದವರಿಗೂ ಸಮಾಧಾನ ಉಂಟುಮಾಡುವಂತಿಲ್ಲ. ಕೋಮುವಾರು ಪ್ರಾತಿನಿಧ್ಯದಂತೆ ಸರಕಾರ ಹುದ್ದೆಗೆ ಜನರನ್ನು ಆರಿಸುವ ಯೋಜನೆಯನ್ನು ತಂದ ಸರ್ಕಾರಕ್ಕೆ ನಾವು ವಂದಿಸಬೇಕಿದೆ. ಆದರೆ ಕಾಂಗ್ರೆಸ್ ಪಕ್ಷದ ಮುಂದಾಳು ಈ ವಿಚಾರವಲ್ಲಿ ಪ್ರತಿಕ್ಷೇಪಿಸಿದ ಅಭಿಪ್ರಾಯಕ್ಕೆ ಪ್ರಯತ್ನಪಡಬೇಕಿದೆ. ಮದ್ರಾಸು ಹಾಗೂ ಇತರ ಪ್ರಾಂತಗಳಲ್ಲಿ ಹಿಂಯಳಿದ ಪಂಗಡದವರಿಗೆ ವಿಶೇಷ ಪ್ರಾತಿನಿಧ್ಯ ಕೊಡಲ್ಪಟ್ಟಿದೆ. ಕೊಡಗಿನಲ್ಲಿ ನಡೆದ ಸಿಬ್ಬಂದಿ ಖೋತೆ ಅವ್ಯವಸ್ಥೆಯಿಂದಿವೆ. ಮುಂದೆಯೂ ಸಿಬ್ಬಂದಿ ಖೋತೆಗೆ ಸಾಧ್ಯವಿದೆ. ಇಷ್ಟರವರೆಗೆ ನಮ್ಮೊಡನಿದ್ದು ನಮಗೆ ಮಾರ್ಗದರ್ಶಿಯಂತಿದ್ದ ಚೀಫ್ ಕಮಿಷನರು ಹೋಗುವದು ವಿಷಾದದ ಸಂಗತಿ. ಈ ಸಂದರ್ಭದಲ್ಲಿ ನನ್ನ ಧನ್ಯವಾದಗಳನ್ನು ಆಯರಿಗೆ ಅರ್ಪಿಸುವವನಿದ್ದೇನೆ.'

ಶ್ರೀ ಅಬ್ದುಲ್ ರಹಮೂನ್ ಖಾನ್ ರವರು.

'ಬಜ್ಜೆಟ್ಟಿನ ವಿಚಾರದಲ್ಲಿ ನನ್ನ ಅನೇಕ ಸಹ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು. ಈ ಸಂದರ್ಭದಲ್ಲಿ ನಮ್ಮನ್ನಗಲಿ ಹೋಗುವ ಮಾನ್ಯ ಆಧ್ಯಕ್ಷರಿಗೆ ಹಿಂದುಳಿದ ಪಂಗಡ ಪರವಾಗಿ ನನ್ನ ಅನಂತ ವಂದನೆಗಳನ್ನು ಅರ್ಪಿಸಬೇಕಾಗಿದೆ. ನಮ್ಮೊಡನೆ ಭಾತೃಭಾವದಿಂದ ಈ ವರೆಗೆ ಸಹಕರಿಸಿ ನಮ್ಮನ್ನು ಸುಗಮವಾದ ಹಾದಿಯಲ್ಲಿ ಮುನ್ನಡೆಸುತ್ತಿದ್ದು ಇಂದು ನಮ್ಮನ್ನಗಲುವದೆಂದರೆ ವಿಷಾದದ ಸಂಗತಿ. ಅವರಿಗೆ ಆಯುರಾರೋಗ್ಯವನ್ನು ದಯಪಾಲಿಸಲೆಂದು ದೇವರಲ್ಲಿ ಬೇಡುತ್ತೇನೆ.'

ಶ್ರೀ ಐ. ಯಂ. ಬೆಳ್ಯಪ್ಪನವರು.

'ಸಿಪಿ ಎಂಡ್ ಬೆರಾರ್ ಪ್ರಾಂತಗಳಿಗೆ ಹೋಲಿಸಿದರೆ ಕೊಡಗಿನ ಸ್ಥಿತಿಯು ತೀರಾ ಶೋಚನೀಯವಾಗಿದೆ. ಆದರೆ ಸರಕಾರ ವೇ ಆಗಲಿನಮ್ಮ ಮುಂದಿನ ಜನಾಂಗದ ಭವಿಷ್ಯವನ್ನು ಮೂರ್ಪಡಿಸುವಂಥಾದ್ದಿರಬೇಕು ಅಂದಿರುವರು. ನಮ್ಮ ಈ ಕೊಡಗು ನಾಡನ್ನು ಬ್ರಿಟಿಷರಿಗೆ ಕೊಟ್ಟದ್ದಾಗಿದೆ. ಬ್ರಿಟಿಷರು ಈ ನಾಡನ್ನು ಗೆದ್ದಿಲ್ಲ. ಬ್ರಿಟಿಷ್ ಸರ್ಕಾರದ ಆಡಳಿತೆಯು ಕೊಡಗು ನಾಡಿನಲ್ಲಿ ಶತಮಾನಗಳಿಗೆ ಮೇಲೆ ವರ್ಷಗಳು ಸಂದರೂ ದೇಶದ ಅಭಿವೃದ್ಧಿಗೊಂಡಿರುವದಿಲ್ಲ. ಈ ದೇಶವು ಜವಾಬ್ದಾರಿ ಸರ್ಕಾರಕ್ಕೆ ಆಯೋಗ್ಯವೆಂದೋ, ಎಲ್ಲಾ ಜನರ ನಂಬಿಕೆಯನ್ನು ಒಳಿಸಿ ಒಪ್ಪುವ ಮನುಷ್ಯ ಮಂತ್ರಿ ಪದವಿಗೆ ಸಿಕ್ಕುವದು ದುರ್ಲಭವೆಂದೋ ಬೇಕಿನೆಂದುಬ್ಬಾರು. ಇದೆಲ್ಲಾ ಅಪರ ಕೃತ್ರಿಮ ಕೋಧನೆಗಳು. ಇಂಥಾ ರೀತಿಯ ಹೇಳಿಕೆಗಳು ಅಯೋಗ್ಯವಾಗಿವೆ. ಈ ರೀತಿಯ ಹೇಳಿಕೆಗಳು ಜನತೆಯನ್ನು ಗುಲಾಮಗಿರಿಯಲ್ಲಡಲು ಸರಕಾರವು ಹೂಡುವ ಮಾರ್ಗಗಳೆಂದು ಹೇಳಬಯಸುತ್ತೇನೆ. ಕೋಮುವಾರು ಸಮಸ್ಯೆಯು ಜನತೆಯ ಮನ್ನಡೆಗೆ ಒಂದು ಕಂಟಕಪ್ರಾಯವಾಗಿದೆ. ಕೊಡಗಿನ ಚೀಫ್ ಕಮಿಷನರಾಗಿದ್ದ ಲೆಫ್ಟೆನೆಂಟ್ ಕರ್ನಲ್ ಒರ್ಕ್ಹಾರವರು 'ಕೋಮುವಾರು ಸೌಹಾರ್ದತೆಯಲ್ಲಿ ಕೊಗಿನಂಥಾ ರಾಷ್ಟ್ರವು ಭಾರತದಲ್ಲಿಲ್ಲ. ಇಲ್ಲಿಯ ಪ್ರಕೃತಿ ಹಾಗೂ ಸುತ್ತಲವೇಶಗಳೇ ಕೋಮುವಾರು ಐಕ್ಯತೆ ಸಾಧನಗಳಾಗಿವೆ'ಯೆಂದು ಹೇಳಿರುವರು. ಆದರೆ ನಮ್ಮ ಶತಮಾನದ ಬ್ರಿಟಿಷ್ ಸಮ್ಮಿಳಿತದಲ್ಲಿ ನಮ್ಮ ಆರ್ಥಿಕ, ಸಾಮಾಜಿಕ, ನೈತಿಕ ಶೋಷಣೆಯು ನಡೆದು ಇಂದು ನಾವು ವಿವಿಧ ರೀತಿಯ ಕಷ್ಟಸಂಪರ್ಕಗಳಿಗೊಳಗಾಗಿರುವೆವು. ಭೂಮಾಲಿಕರು ಭೂಮಿ ಇಲ್ಲದವರಾಗುತ್ತಿದ್ದಾರೆ. ಜನ್ಮ ಭೂಮಿಗಳು ಮಾಯವಾಗುತ್ತಿವೆ. ಆಡಳಿತದ ಭವ್ಯತೆಯೊಗಲೀ, ಶಾಂತತೆಯೊಗಲೀ ಜನತೆಯ ಕರುಳಿನ ಕೂಗನ್ನು ಹಿಂಗಿಸಲಾರವು. ನಿರಂಕುಶಾಧಿಕಾರವು ದಿನೇ ದಿನೇ ಕಾಲಿಕ್ಕುತ್ತಿವೆ. ರಾಷ್ಟ್ರೀಯ ಅಭಿವೃದ್ಧಿಯ ಕಾರ್ಯಗಳನ್ನು ಮೂಲೆಗೊತ್ತಿ ಬಜ್ಜೆಟ್ಟಿನಲ್ಲಿ ಉಳುವರಿ ತೋರಿಸಿರುವರು. ಇಂಥಾ ಕಣ್ಣು ಕಟ್ಟಿನಿಂದ ದೇಶದ ಪ್ರಗತಿಯು ಸಾಧಿಸದು. ಇಲ್ಲಿ ಈ ಮೊದಲು ಮಾತಾಡಿದ ಯುಂ. ಯಂ. ಬೆಳ್ಯಪ್ಪನವರಿಗೆ ಜವಾಬ್ದಾನ್ನೀಯಬಯಸುತ್ತೇನೆ. ಈ ಮೊದಲು ಪಿ ಐ. ಬೆಳ್ಯಪ್ಪನವರು ಪಾನ ನಿರೋಧದ ತರಾವೊಂದನ್ನು ಮಂಡಿಸಿದಾಗ ಶ್ರೀ ಎಂ. ಎಂ. ಬೆಳ್ಯಪ್ಪನವರು ಅದನ್ನು ತೀವ್ರವಾಗಿ ವಿರೋಧಿಸಿ ಜನತೆಯ ಸಂಪ್ರದಾಯಕ್ಕೆ ಈ ರೀತಿಯ ವರ್ತನೆ ವಿರೋಧವೆಂದು ಮಾತಾಡಿದರು. ಆದರೆ ಇಂದು ಶ್ರೀ ಯಂ. ಯಂ. ಬೆಳ್ಯಪ್ಪನವರು ಪಾನ ನಿರೋಧದ ಬಗ್ಗೆ ವಹಿಸುತ್ತಿರುವ ಶ್ರಮವು ಶ್ಲಾಘನೀಯವಾದದ್ದೇ. ಆವರ ಮನೋ ನಿಶ್ಚಯವು ಇಷ್ಟು ಬೇಗ ಬದಲಾವದ್ದು (ಆಥವ ಹಿಂಗಿ ಗುಟ್ಟನ ಅರ್ಥವೇನೂ ಇಲ್ಲದಿದ್ದರೆ) ಶ್ಲಾಘನೀಯವೇ.

ಇಂದಿನ ಸಿವಿಲ್ ಸರ್ಜನರಾದ ಕೆಪ್ಟನ್ ಚಾರ್ಲಿವುಡ್ ಐ. ಎಂ. ಎಸ್. ರವರು ಲ್ಯಾಪ್ರೆಗಳ ಖರ್ಚನ್ನು ಕಮ್ಮಿ ಮಾಡಿರುವದಲ್ಲದೆ ಕೆಲಸ ಕಾರ್ಯಗಳನ್ನಾದರೂ ದಕ್ಷತೆಯಿಂದ ನಡೆಸುತ್ತಿದ್ದಾರೆ. ಕಡುಬಡವರಿಗೆ ಕರುಣೆಯನ್ನು ತೋರಿಸುತ್ತಿದ್ದಾರೆ. ಇದರಿಂದಾಗಿ ಮೈಸೂರಿಗೆ ಹೋಗುವ ಕಾಯಿಲಸ್ಥರ ಸಂಖ್ಯೆ ಕಮ್ಮಿಯಾಗುತ್ತಿದೆ. ಇಂಥಾ ಮಾನ್ಯರಿಗೆ ಇಲ್ಲಿನನ್ನ ವಂದನೆಯನ್ನರ್ಪಿಸುತ್ತೇನೆ. ಕೊಡಗಿಗೆ ವಂತಿಗೆ ಸಿಗಬಹುದೆಂಬುದರಲ್ಲಿ ಹೆಚ್ಚು ಅನುಮಾನವಿಲ್ಲ. ಸರಕಾರವೂ, ಜನತೆಯೂ ಅಚಲ ಪ್ರಯತ್ನ ಮಾಡಬೇಕಿದೆ. ಇಷ್ಟು ದಿನಗಳ ವರೆಗೆ ನಮ್ಮೊಡನಾಡಿ ನಮ್ಮ ಮಾರ್ಗದರ್ಶಿಯಂತಿದ್ದ ಚೀಫ್ ಕಮಿಷನರು ಇನ್ನು ಮುಂದೆ ನಮ್ಮೊಡನಿರಲಾರರಾದುದರಿಂದ ಅವರಿಗೆ ನಮ್ಮ ವಂದನೆಗಳನ್ನರ್ಪಿಸುವದು ಕರ್ತವ್ಯವಿದೆ. ಆವರ ಆಫೀಸಿನ ಅವಧಿ ಮುಗಿಯುವುದರೊಳಗೆ ಅವರು ಕೊಡಗಿಗೆ ಸುಧಾರಣೆಗಳನ್ನು ಕೊಟ್ಟದ್ದೇ ಆದರೆ ಅವರ ಹೆಸರು ವಂಶಪಾರಂಪರ್ಯವಾಗಿ ಚಿರಸ್ಥಾಯಿಯಾಗಿ ಉಳಿಯುತ್ತಿತ್ತು.'

ಶ್ರೀ ಕೆ. ಸಿ. ಕರುಂಬಯ್ಯನವರು.

ಕೊಡಗಿನ ಬಜ್ಜೆಟ್ಟಿನಲ್ಲಿ ಈ ಎರಡು ವರ್ಷಗಳಿಂದ ಉಳುವರಿಯಾಗಿದ್ದರೂ ಆದರಲ್ಲಿ ಹೊಗಳಿಕೊಳ್ಳಬಹುದಾದ ವಿಚಾರವೇನೂ ಇಲ್ಲ. ಈಗ ಜಾರಿಯಲ್ಲಿ ತಂದಿರುವ ಸಿಬ್ಬಂದಿ ಖೋತೆಯು ನ್ಯಾಯಬದ್ಧವಾಗಿಲ್ಲದಿದ್ದರೂ ಆದರ ಫಲಿತಾಂಶವು ಮುಂಚೆ ಸಿಬ್ಬಂದಿ ಖೋತೆಯನ್ನು ಸಮರ್ಪಕವಾಗಿ ಜನತೆಯ ಕೇಳಿಕೆಯಂತೆ ನಡಿಸಿದರೆ ಹೆಚ್ಚಿನ ಉಳುವರಿಯಾಗುವದೆಂಬುದನ್ನು ಸೂಚಿಸುತ್ತಿದೆ. ಬಜ್ಜೆಟ್ಟನ್ನು ವಿವರವಾಗಿ ಪರಿಶೀಲಿಸಿದರೆ ರಾಷ್ಟ್ರೀಯ ಕಟ್ಟಾಣಿ ಕಾರ್ಯಗಳಿಗೆ ಹಣ ವಿನಿಯೋಗ ಮಾಡಿದ್ದು ಕಂಡು ಬರುವದಿಲ್ಲ. ಡಿಬೋರ್ಡಿಗೆ ಕೊಡುತ್ತಿದ್ದ ವಂತಿಗೆಯನ್ನು ಕಮ್ಮಿ ಮಾಡಿ ರಾಷ್ಟ್ರಾಭಿವೃದ್ಧಿಗೇ ಧಕ್ಕೆ ತಂದಿರುವರು. ಬೇರೆ ಪ್ರಾಂತ್ಯಗಳಲ್ಲಿ ನಿರಕ್ಷರತಾ ನಿವಾರಣೆ ಕೈಕೊಂಡಿರುವಾಗ ನಮ್ಮ ಸರ್ಕಾರವು ಅದಕ್ಕೆ ವ್ಯತಿರಿಕ್ತ ವರ್ತಿಸುತ್ತಿದೆ. ವ್ಯವಸಾಯಗಾರರ ಸ್ಥಿತಿಯಾವರೂ ದಿನೇ ದಿನೇ ವಿಪನ್ನಾವಸ್ಥೆಗೆ ತಲಪುತ್ತಿದೆ. ಸರ್ಕಾರವು ಈ ಇಲಾಖೆಯ ಬಗ್ಗೆ ತೋರಿಸುತ್ತಿರುವ ಅನಾಸಕ್ತಿಯು ಹೇಳಲಾಸಲ್ಲ. ಆದ್ದರಿಂದ ರಾಷ್ಟ್ರದ ಬೆನ್ನೆಲುಬಿನಂತಿರುವ ರೈತನ ಉತ್ಪಾದನಾ ಶಕ್ತಿಯು ಕುಗ್ಗಿ ಅತನು ನಿಸ್ತೇಜನಾಗಿದ್ದರೆ ಅದು ವಿಶೇಷವಲ್ಲ. ವೆಟರಿನರಿ ಇಲಾಖೆಯು ರೈತನ ಅಭಿವೃದ್ಧಿಗೆ ಪ್ರಥಮ ಸಾಧನ. ಇದಾದರೂ ಸರಕಾರದಿಂದ ಸರಿಯಾದ ಸಹಾಯವನ್ನು ಪಡೆಯುತ್ತಿಲ್ಲ. ಸರಕಾರವು ಮಾಡುತ್ತಿರುವ ಇಂದಿನ ಅಳೆಪೆಯ ಪ್ರಯತ್ನವು ಹೊಗಳಲರ್ಹವಾಗಿಲ್ಲ. ಸಹಕಾರದ ಇಲಾಖೆಯಾದರೂ ಸರಕಾರದಿಂದ ಪ್ರೋತ್ಸಾಹವನ್ನು ಪಡೆದಿಲ್ಲ. ಬ್ಯಾಂಕಿಗಾಗಲೀ, ಬ್ಯಾಂಕಿನ ಮೇಲ್ವಿಚಾರಣಾ ಶಾಖೆಗಾಗಲೀ ಸರ್ಕಾರವು ಸಹಾಯ ಮಾಡುವದು ಅಗತ್ಯ ಬೇಕಿದೆ. ವೈದ್ಯಕೀಯದಲ್ಲೂ ಜನತೆಯ ಆ

ರೋಗ್ಯದ ಬಗ್ಗೆ ಹೆಚ್ಚಿನ ನಿಗ ವಹಿಸಬೇಕೆದೆ. ಪೊಲೀಸು ಇಲಾಖೆಯ ವಿಚಾರ ನೋಡಿದರೆ ದಿನೇ ದಿನೇ ಖೂನಿ ಕೆಲಸಗಳು ಹೆಚ್ಚುತ್ತಿರುವದು ಕಂಡು ಬರುತ್ತದೆ. ಇಲಾಖೆಯ ಮೇಲಧಿಕಾರಿಗಳು ಇವುಗಳ ಬಗ್ಗೆ ಹೆಚ್ಚಿನ ಶ್ರಮ ವಹಿಸಬೇಕಿದೆ. ನೀರಾವರಿ ಯೋಜನೆಯು ಸರ್ಕಾರದ ಯೋಜನೆಯಲ್ಲೇ ಇಲ್ಲವೆಂಬಂತೆ ಭಾಸವಾಗುತ್ತದೆ. 1924ರಿಂದ ಆಂದರೆ ಕೌನ್ಸಿಲು ಕೊಡಗಿಗೆ ಬಂದಂದಿನಿಂದ ದೇಶದ ಪರಿಸ್ಥಿತಿಯು ಏನೇನೂ ಸುಧಾರಿಸಿಲ್ಲ. ಕೊಡಗಿನಲ್ಲಿ ಕೋಮುವಾರು ಭಿನ್ನಭೇದವು ಹೆಚ್ಚಿಲ್ಲ. ಆದರೆ ಈಗ ಕೋಮುವಾರು ಪ್ರಾತಿನಿಧ್ಯದ ಯೋಜನೆಯು ಒಗ್ಗಟ್ಟಿನಲ್ಲಿದ್ದ ಈ ದೇಶದಲ್ಲಿ ಕೋಮುವಾರು ವಿಷಾಣುವನ್ನು ಬಿತ್ತದಿರದು. ಈ ಕೋಮುವಾರು ವಿಷದಿಂದ ಜನತೆಗಾಗಲೀ ಸರಕಾರಕ್ಕಾಗಲೀ ಹಿತವಾಗದು. ಆದ್ದರಿಂದ ಇದನ್ನು ಸರಕಾರವು ಒಡನೆ ತೆಗೆದು ಹಾಕಬೇಕು. ಕೊಡಗಿಗೆ ಸುಧಾರಣೆಗಳು ಈ ಮೊದಲೇ ಸಲ್ಲಬೇಕಿತ್ತು. ಇನ್ನಾದರೂ ತಡವಾಗಿಲ್ಲ. ಇಂಡಿಯಾ ಸರ್ಕಾರದಿಂದ ಸುಧಾರಣೆಯನ್ನೂ ವಂತಿಗೆಯನ್ನೂ ಪಡೆಯಲು ಸ್ಥಳೀಯ ಸರ್ಕಾರವು ಅಚಲ ಪ್ರಯತ್ನಪಡಬೇಕಿದೆ.'

ಲೆ. ಕರ್ನಲ್ ಮೂರ್ಲೆಂಡ್‌ರವರು.

'ಕೊಡಗಿನ ಚೀಫ್ ಕಮಿಷನರಾಗಿಯೂ, ಕೌನ್ಸಿಲಿನ ಅಧ್ಯಕ್ಷರಾಗಿಯೂ ನಮ್ಮೊಡನಿದ್ದು ಕಾರ್ಯಭಾರಗಳನ್ನು ಸುವ್ಯವಸ್ಥಿತ ರೀತಿಯಿಂದ ನಡೆಸುತ್ತಿದ್ದ ನಮ್ಮ ಅಧ್ಯಕ್ಷರು ಇನ್ನು ಮುಂದೆ ನಮ್ಮೊಡಲಿರಲಾರರಾದ್ದರಿಂದ ಅವರಿಗೆ ನನ್ನ ಮತದಾರರ ಪರ ವಂದನೆಗಳನ್ನರ್ಪಿಸುತ್ತೇನೆ. ಮುಂದೆ ಅವರಿಗೆ ಆಯುರಾರೋಗ್ಯವನ್ನು ಭಗವಂತನು ದಯಪಾಲಿಸಲಿ'.

ಶ್ರೀ. ಅಜ್ಜಾಸೂಡ ಮೂಡಪ್ಪನವರು.

'ನಮ್ಮ ಮುಂದಿರುವ ಕೊಡಗು ಬಜೆಟಿನ ವಿಚಾರ ಮಾತಾಡುವ ಮೊದಲು ಸರಕಾರದ ನಡವಳಿಕೆಯ ವಿಚಾರ ಒಂದೆರಡು ಮಾತುಗಳನ್ನಾಡಬೇಕಾಗಿದೆ ಕಳೆದ ಬಜೆಟ್ ಅಧಿವೇಶನದಿಂದ ಇಂದಿನವರೆಗೆ ಈ ಸಭೆಯಲ್ಲಿ ಕಲೆತು ಪಾಸು ಮಾಡಿದ ಗೊತ್ತುನಳಿಗಳನ್ನೆಲ್ಲಾ ಕಸದ ಬುಟ್ಟಿ ಕಾಣಿಸಿರುವ ಸರಕಾರದ ವರ್ತನೆಯು ಜನ ಪ್ರತಿನಿಧಿಗಳಾದ ನಮ್ಮ ಧ್ಯೇಯವನ್ನು ಬಗ್ಗು ಬಡಿಯುವಂತಿದೆ. ಸಭೆಯಲ್ಲಿ ಜನಹಿತಚಿಂತಕರ ಸೋಗಿನಲ್ಲಿ ವರ್ತಿಸಿ ಬಂದೆ ಅಧಿಕಾರ ಬಲದಿಂದ ಒನಾಪಕಾರಮಾಡುವದು ರಾಜಧರ್ಮವಲ್ಲ. ಸರಕಾರವು ತನ್ನ ಮನಸ್ಸಿಗೆ ಹೊಳೆದಂತೆ ಸಾಮ್ರಾಜ್ಯಶಾಹೀ ಹಿಡಿತವನ್ನು ಹೆಚ್ಚಿಸಲು ಇಲ್ಲಿ ನಿರಂಕುಶ ಅಧಿಕಾರವನ್ನು ಪ್ರತಿನಿಧಿಸುವ ಪ್ರಯತ್ನ ಮಾಡಿದರೆ ಕೊಡಗು ಸಂಕಟಪಡಬೇಕಿಲ್ಲ. ಸರಕಾರವು ದೇಶದ ಬೆನ್ನೆಲುಬಿನಂತಿರುವ ವಿವಿಧ ಇಲಾಖೆಗಳನ್ನು ನಿರ್ಲಕ್ಷಿಸಿದೆ. ರೈತನಿಗೆ ತಲೆಭಾರದ ಕಂದಾಯ ಹೊರಿಸಿ ಆತನ ಉತ್ಪಾದನ ಶಕ್ತಿಯನ್ನು ಕುಂದಿಸಿದೆ. ಮಳೆಯ ಅಭಾವದಿಂದಾಗಿ ರೈತನು ಕಂಗೆಟ್ಟಿದ್ದಾನೆ. ನೀರಾವರಿ ಯೋಜನೆಯು ಸರಕಾರದ ಯೋಜನೆಯಲ್ಲೇ ಇಲ್ಲ. ಒಟ್ಟಾರೆ ನನ್ನ ಅಭಿಪ್ರಾಯದಲ್ಲಿ ಈ ಕೌನ್ಸಿಲು ಕೇವಲ ಬಡಜನತೆಯ ಆರ್ಥಿಕ ಶೋಷಣೆ ಮಾಡುವ ಒಂದು ವಿಧಾನವೆಂದು ಹೇಳಬೇಕಾಗಿದೆ. ಕರಪಾವತಿ ಮಾಡುವ ನಮ್ಮ ಸಹೋದರರಿಗೆ ಕೌನ್ಸಿಲಿನಿಂದ ಒಂದಾದರೂ ಹೇಳಿಕೊಳ್ಳಬಹುದಾದ ಸುಧಾರಣೆಯನ್ನು ಕೊಡಿಸುವದು ಅಸಾಧ್ಯವಾಗಿರುವಾಗ, ದೇಶೀಯರ ಪ್ರತಿನಿಧಿಗಳನ್ನು ಕೌನ್ಸಿಲಿಗೆ ಕಳುಹಿಸುವದು ಕೇವಲ ನಕಲೀ ವಿಚಾರವೇ ಆಗಿದೆ.'

ಫೈನಾನ್ಸು ಮೆಂಬರು.

ಬಜೆಟ್ಟಿನ ವಿಚಾರದ ನನ್ನ ವಿವರವಾದ ಭಾಷಣವನ್ನು ಈ ಮೊದಲೇ ನಿಮ್ಮ ಮುಂದಿಟ್ಟಿರುವೆನು. ಈಗ ಸದ್ಯ ನಾನು ಹೇಳಬಯಸುವ ವಿಚಾರವೆಂದರೆ ಚೀಫ್ ಕಮಿಷನರ ಹುದ್ದೆಯ ವಿಚಾರ. ಬೆಂಗಳೂರಿನಲ್ಲಿದ್ದ ಕೊಡಗಿನ ಚೀಫ್‌ಕಮಿಷನರ ಸ್ಥಳ ಬದಲಾಯಿಸುವದು ಕೆಲವರಿಗೆ ಅನುಚಿತವಾಗಿ ಕಂಡುಬಂದಿರಬಹುದು. ಆದರೆ ನನ್ನ ಅಭಿಪ್ರಾಯದಲ್ಲಿ ಕೊಡಗಿನ ಚೀಫ್‌ಕಮಿಷನರು ಕೊಡಗಿನಲ್ಲೇ ಇರಬೇಕಾದುದು ಅಗತ್ಯ. ಆದ್ದರಿಂದ ಬದಲಾವಣೆಯು ದೇಶ ಹಿತಕಾರಕವೆಂದೇ ಹೇಳಬಯಸುತ್ತೇನೆ. ಈಗಿನ ಚೀಫ್ ಕಮಿಷನರು ಶೀಘ್ರದಲ್ಲೇ ನಮ್ಮನ್ನಗಲುವ ಪ್ರಯುಕ್ತ ಅವರಿಗೆ ನಮ್ಮ ವಂದನೆಯನ್ನು ಈ ಮೂಲಕ ಅರ್ಪಿಸುತ್ತೇನೆ.'

(ಮುಂದುವರಿಯುವದು.)

ರಾಮಘಡದಲ್ಲಿ ಕಳ್ಳ ಕೊರಮರ ಓಡಾಟ.

ಈಗಾಗಲೇ 18 ಮಂದಿಯ ಪಸ್ತಗಿರಿ

ರಾಮಘಡಕ್ಕೆ ಪ್ರೇಕ್ಷಕರೂ, ಪ್ರತಿನಿಧಿಗಳೂ ಕಾಂಗ್ರೆಸ್ ಭಕ್ತರೂ ಬಂದಿರುವಂತೆ ಮತ್ತು ಬರುತ್ತಿರುವಂತೆ ನಾನಾ ವೇಷ ಭಾಷೆಗಳ ಕಳ್ಳ ಕೊರಮರೂ ಬಂದು ಕೈಚಳಕಕ್ಕೆ ಅವಂಭಿಸಿದ್ದಾರೆ.

ಈಗಾಗಲೇ ೫೦೦ ರೂಗಳ ವರೆಗೆ ಕದ್ದದಕ್ಕಾಗಿ 18 ಮಂದಿ ಇಂಪೂರು ಕಳ್ಳರನ್ನು (ಇವರಲ್ಲಿ ೩ ಮಂದಿ ಹೆಂಗಸರು) ವಸ್ತಗಿರಿ ಮಾಡಲಾಗಿದೆ. ಈ 18 ಮಂದಿಯೂ ಸೇರಿ ನಾಲ್ಕು ರಿಸ್ಟ್ ವಾಚುಗಳನ್ನೂ ನಾಲ್ಕು ಫೌಂಟನ್ ಪೆನ್‌ಗಳನ್ನೂ ಇತರ ಅನೇಕಾನೇಕ ಸಾಮಗ್ರಿಗಳನ್ನೂ ಕದ್ದಿದ್ದಾರೆ. ಇವರು ಇದೇ ಕಸಬಿನವರು ಕಾಂಗ್ರೆಸ್ ಅಧಿವೇಶನದಲ್ಲಿ ತಮ್ಮ ಅದೃಷ್ಟ ಪರೀಕ್ಷೆ ಮಾಡಿಕೊಳ್ಳಲು ಬಂದಿದ್ದಾರೆ.

ಇವರು ಕಾಂಗ್ರೆಸ್ ನಗರದ ಜನಸಂದಣಿಯೊಡನೆ ಸೇರಿ ಓಡಾಡುತ್ತಾ ಬೇಹುಷಾರಿಯು ಜನರ ಸಾಮಾನುಗಳನ್ನು ಎಗರಿಸುತ್ತಾ ಇದ್ದಾರೆ. ದಾಮೋದರ ನದಿ ತೀರದಲ್ಲಿ ಇವರ ಚಟುವಟಿಕೆ ಬಹಳ; ಏಕೆಂದರೆ ಇಲ್ಲಿ ಜನರು ಸ್ನಾನ ಮಾಡಲು ತಮ್ಮ ಬಟ್ಟೆ ಬರೆಗಳನ್ನು ದಡದಲ್ಲಿ ಬಚ್ಚಿಟ್ಟು ಹೋಗುವ ಸಮಯ ಕಾದು ಈ ಕಳ್ಳರು ತಮ್ಮ ಕೆಲಸ ನಡಿಸುತ್ತಿದ್ದಾರೆ.

ಕೊಡಗು ನ್ಯಾಯ ವಿಧಾಯಕ ಸಭೆಯ

ಅಧ್ಯಕ್ಷರ ಭಾಷಣ.

ಕೊಡಗನ್ನು ಬ್ರಿಟಿಷರ ಆಧೀನಕ್ಕೆ ತೆಗೆದುಕೊಂಡಂದಿನಿಂದ ಇಂದಿನ ವರೆಗೆ ಈ ದೇಶವು ಮೈಸೂರಿನಲ್ಲಿ ರೆಸಿಡೆಂಟರಾಪ ಇಲ್ಲಿಯ ಚೀಫ್‌ಕಮಿಷನರ ಮೇಲ್ವಿಚಾರದಲ್ಲಿತ್ತು. ಅಂಥಾ ಸಂಬಂಧವು ಇನ್ನು ಕೆಲವೇ ದಿನಗಳಲ್ಲಿ ತಪ್ಪಿಹೋಗುವದೆಂದೂ, ಚೀಫ್‌ಕಮಿಷನರಾಗಿ ನಿಮ್ಮ ಮುಂದೆ ಇದೇ ನನ್ನ ಕಡೇ ಬಾರಿಯ ಭಾಷಣವೆಂದೂ ನಾನು ಹೇಳಬೇಕಾಗಿದೆ. ನಿಮ್ಮ ಪ್ರಾಂತದ ಮೇಲುಸ್ತುವಾರಿಯಲ್ಲಿ ಇನ್ನು ಮುಂದೆ ನಾನು ಇರಲಾರನೆಂದು ನಿಮಗೆ ನಾನು ಖೇದಪೂರ್ವಕವಾಗಿ ಹೇಳುತ್ತೇನೆ. ಕೊಡಗು ಸರಕಾರದಲ್ಲಿ ಮೂಡಿದ ಸಿಬ್ಬಂದಿ ಖೋತೆಯು ಕೇವಲ ಕೆಳತರಗತಿಯ ಉದ್ಯೋಗಸ್ಥರನ್ನು ಮಾತ್ರ ತೊಂದರೆ ಪಡಿಸಿದೆಯೆಂದು ಕೌನ್ಸಿಲಿನ ಒಳಗೂ ಹೊರಗೂ ನಿರೀಕ್ಷಣನ್ನು ಕೇಳಿಬ್ಬೇನೆ. ಆದರೆ ಈಗ ಮೇಲಧಿಕಾರಿಗಳಲ್ಲಿ ಹಾಗೂ ಕೆಳತರಗತಿಯ ನೌಕರರಲ್ಲಿ ಸಿಬ್ಬಂದಿ ಖೋತೆಯೊದ್ದು ನಿಮಗೆ ಕಂಡುಬರುವದು. ಆರ್ಥಿಕ ಪರಿಶೋಧನಾ ಆಫೀಸರರ ಶಿಪಾರಸ್ಸಿನ ಮೇಲೆ ಇಂಡಿಯಾ ಸರಕಾರದ ಆರ್ಡರುಗಳು ಬಂದಿವೆ. ನಿಜವಾಗಿಯೂ ಇನ್ನು ಕೆಲವು ವಿಚಾರಗಳಲ್ಲಿ ಆವರ ಆರ್ಡರುಗಳು ಬರತಕ್ಕದ್ದಿವೆ. ಈ ಆರ್ಥಿಕ ಪರಿಶೋಧನಾ ಕಮಿಟಿಯ ವರದಿಯಿಂದ ಕೊಡಗಿನ ಆರ್ಥಿಕ ಸ್ಥಿತಿಯು ಎಲ್ಲರಿಗೂ ಮನವರಿಕೆಯಾಗಿದೆ. ಇಂಡಿಯಾ ಸರಕಾರದಿಂದ ವಂತಿಗೆ ಸಿಕ್ಕುವದು ಇದೇ ಕಡೇ ವರ್ಷವಾಗಿದೆ. ಮುಂದಕ್ಕೆ ಪ್ರಾಂತವು ತನ್ನ ಆರ್ಥಿಕ ಬಲದಿಂದ ಮುನ್ನಡೆಯಬೇಕಾಗುವದು. ಸಿಬ್ಬಂದಿ ಖೋತೆಯು ಪೂರ್ತಿಯಾದಾಗ ಕೊಡಗಿನ ಬಜೆಟ್ಟಿನಲ್ಲಿ ಆರ್ಥಿಕ ಅಭಾವವು ಕಂಡುಬಾರದೆಂದು ನಾನು ನಂಬುತ್ತೇನೆ. ಕೊಡಗು ದೇಶದ ಆಡಳಿತೆ ಯಾವ ಯಾವ ಇಲಾಖೆಯಿಂದ ಮುಂದರಿಯಬೇಕೆಂದು ನನಗೆ ತಿಳಿದಿದೆ. ಇವುಗಳಲ್ಲಿ ವ್ಯವಸಾಯವು ಪ್ರಧಾನವಾದ್ದು. ಕೊಡಗಿನ ವ್ಯವಸಾಯ ಇಲಾಖೆಯು ನ್ಯಾಯ ಸಮರ್ಪಕವಾದ ರೀತಿಯಲ್ಲಿ ಮುಂದರಿದಿಲ್ಲವೆಂದು ನಾನು ಒಪ್ಪುತ್ತೇನೆ. ಆದ್ದರಿಂದ ರೈತನಿಗೆ ಸರಿಯಾದ ಸಹಾಯವಾಗುತ್ತಿಲ್ಲವೆಂಬುದಾದರೂ ನನಗೆ ತಿಳಿದಿದೆ. ವ್ಯವಸಾಯವನ್ನು ಪುನರ್ರಚನೆ ಮಾಡಿ ಸಮರ್ಪಕ ಕಾರ್ಯ ನಡೆಸುವ ಏರ್ಪಾಡುಗಳು ಒಡನೇ ಆಗುವವು. ಈ ಇಲಾಖೆಯ ಆಗ್ರಸ್ಥಾನದಲ್ಲಿ ಬ್ರಿಟಿಷ್ ಇಂಡಿಯಾದಿಂದ ಎರವು ಬಂದ ಬಬ್ಬ ಅಧಿಕಾರಿ ಇರುವನು. ಇದೇ ರೀತಿಯ ಅಭಿವೃದ್ಧಿಯು ವೆಟರಿನರಿ ಇಲಾಖೆಯಲ್ಲು ಆಗಬೇಕೆಂಬುದನ್ನು ನಾನು ಒಪ್ಪುತ್ತೇನೆ. ಇದರ ಅಭಿವೃದ್ಧಿಯ ಕಾರ್ಯಕ್ರಮಗಳು ದೇಶದ ಆರ್ಥಿಕ ಸ್ಥಿತಿಯನ್ನನುಸರಿಸಿ ನಿಂತಿವೆ. ಸಹಕಾರ ಮಾರ್ಕೆಟಿಂಗ್ ವ್ಯವಸ್ಥೆಯಾದರೂ ತುರಿತದ್ದೇ ಇದೆ. ಈ ವಿಚಾರವು ಪರ್ಯಾಲೋಚಿಸಲ್ಪಡುತ್ತದೆ. ಫಾರೆಸ್ಟ್ ಇಲಾಖೆಯ ವಿಚಾರದಲ್ಲಿ ಇಂಡಿಯಾದ ಇನ್ಸ್‌ಪೆಕ್ಟರ್ ಜನರಲ್‌ರವರು ಹೇಗೆ ನಮಗೆ ಮಾಹಿತಿಯನ್ನು ಕೊಡುತ್ತಿದ್ದಾರೋ ಅದೇ ರೀತಿಯಲ್ಲಿ ವ್ಯವಸಾಯ, ವೆಟರಿನರಿ ಹಾಗೂ ಮಾರ್ಕೆಟಿಂಗ್ ವಿಚಾರದಲ್ಲಿ ಇಂಡಿಯಾ ಸರಕಾರದ ಅಧಿಕಾರಿಗಳು ಮುಂದಕ್ಕೆ ನಮಗೆ ಮಾರ್ಗದರ್ಶಿಗಳಾಗುವರೆಂದು ತಿಳಿಸಲು ಸಂತೋಷವೆನಿಸುತ್ತದೆ. ಈ ಮೊದಲು ಇಂಡಿಯಾ ಸರಕಾರದ ಪ್ರೇರಣೆಯಂತೆ ಬಂದು ಕೊಡಗಿನ ಸ್ಥಿತಿಗತಿಗಳನ್ನು ಪರಿಶೀಲಿಸಿ ಹೋದ ಅಧಿಕಾರಿಗಳಿಗೆ ನಾನು ವಂದಿಸಬೇಕಿದೆ. ಮಲೇರಿಯಾ ಪರಿಶೋಧನೆಗಾಗಿ ಇಂಡಿಯಾ ಪರಿಶೋಧನಾ ಸಂಸ್ಥೆಯವರು ಕೊಡಗಿನಲ್ಲಿ 25,000 ರೂಪಾಯಿಗಳನ್ನು ಖರ್ಚು ಮಾಡುವಂತೆ ನಿರ್ಧರಿಸಿರುವರೆಂದು ತಿಳಿಸಲು ಸಂತೋಷವೆನಿಸುತ್ತದೆ. ಇದರಿಂದ ಕೊಡಗಿಗೆ ಅವರ್ಣನೀಯವಾದ ಅನುಕೂಲತೆಯಾಗುವದರಲ್ಲಿ ಸಂಶಯವಿಲ್ಲ. ರೈತರ ಸಾಲನಿವಾರಣೆಯ ಸಮಸ್ಯೆಯು ಪರ್ಯಾಲೋಚಿಸಲ್ಪಡುತ್ತಿದೆ. ಒಂದು ಸಾಲನಿವಾರಣೆಬೋರ್ಡನ್ನು ಈಗಿನ ಹೊಸ ಕಾಯಿದೆಯರೀತ್ಯಾ ಒಡನೇ ನಿರ್ಮಿಸಲ್ಪಡುವದು. ಭೀಕರ ಕಂತಿನ ಸಾಲ ಕೊಡುವ ವಿಚಾರವಾದರೂ ಪರ್ಯಾಲೋಚನೆಯಲ್ಲಿದೆ. ನಾನು ನನ್ನ ಜವಾಬ್ದಾರಿಯನ್ನು ಬಿಟ್ಟು ಹೋಗುವುವೊಳಗೆ ಈ ರಿಯಾಯಿತಿಯು ಜಾರಿಯಲ್ಲಿ ಬರಬಹುದೆಂದು ಆಶಿಸುತ್ತೇನೆ. ಕೊಡಗಿನಲ್ಲಿ ರಾಜಕೀಯ ಬದಲಾವಣೆ ಏನಾದರಾಗುವ ಸಂಭವವಿದೆಯೋ ಎಂದು ನೀವು ಕಾತುರರಾಗಿರಬಹುದು. ಕೊಡಗು ಆರ್ಥಿಕ ತಳಹದಿಯು ಭದ್ರವಾಗುವ ವರೆಗೆ ಈ ವಿಚಾರ ಆಲೋಚಿಸಲ್ಪಡದು ಎಂದು ನಾನು ಮೊದಲೇ ಹೇಳಿದ್ದೇನೆ.

ಕಡೆಯದಾಗಿ ನಾನು, ಮಾನ್ಯ ಸದಸ್ಯರು ನನ್ನೊಡನೆ ಸಹಕರಿಸಿ ಸುಗಮವಾಗಿ ಆಡಳಿತ ರಥವನ್ನು ಮುಂದೂಡಲು ಸಹಾಯಕರಾದುದಕ್ಕೆ ನಿಮಗೆ ವಂದನೆಗಳನ್ನರ್ಪಿಸುತ್ತೇನೆ. ನೀವು ಪ್ರಕೃತಿ ಸೌಂದರ್ಯದಿಂದ ತುಂಬಿ ತುಳುಕುವ ಪ್ರಾಂತದಲ್ಲಿರುವಿರಿ. ಇಲ್ಲಿ ಅನೇಕ ವಿಧದ ಅಭಿವೃದ್ಧಿಗಳಾಗುವ ಅನುಕೂಲತೆಗಳಿವೆ. ನಾನು ನಿಮ್ಮನ್ನು ಹೆಚ್ಚಿನ ಕಾಲ ನನ್ನ ಭಾಷಣದಲ್ಲೇ ಕಡೆದೆನು. ನಮ್ಮ ಮುಂದಿರುವ ಕಾರ್ಯಕಲಾಪಗಳ ಬಗ್ಗೆ ಈಗ ನಿಗವಿಡಬೇಕಾಗಿದೆ.'

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	48,470	0	0
ಜಮಾಬಂದ ಠೇವಣಾತಿ	–	2,19,851	8	4
ವಸೂಲಾದ ಕ್ಷೇಮನಿಧಿ	–	1,56,752	7	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	36,942	0	7
ತ್ರಿಪ್ಟ್ ಡಿಪಾಜಿಟ್ಟು	–	23,523	9	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿತ್ತು. ಆದರೆ ಪುನಹ ತಾ. 29-7-39ರಿಂದ ತತ್ಕಾಲಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:-ಪುಂಡ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಫ್ರೈಜರರ್:-ರಾವ್ ಬಹದ್ದೂರ್ ಪಿ. ದೇವಯ್ಯನವರು.
ಸೆಕ್ರೆಟರಿ.-ಮೆ. ಕೆ. ಸಿ. ಕರುಂಬಯ್ಯನವರು ಎಂ. ಎಲ್. ಸಿ.

ತಾ. 1-3-1940

ಕೊಡಂದೇರ ಡಿ. ಮಾಚಯ್ಯ,
L.D.Sc. (COLLEGE OF DENTISTRY)
EX-SUPERVISOR, LAXMIBAI PATEL DENTAL HOSPITAL, KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ
DENTAL CLINIC
ನಲ್ಲಿ ವಿಚಾರಿಸಿರಿ.
ಸುಲಭ ದರ. (36) ನವೀನ ರೀತಿಯ ಚಿಕಿತ್ಸೆ.

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕಡೆಕಲ್ಲಂಪ್ಪಕ್ಕಿ ರವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಒ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇವರ ಸೇವನೆಯಿಂದ ಪೂರ್ಣ ಗುಣವಾಗಿ ಜನ್ಮಾಗಿ ಕಟ್ಟಿ ಉಂಟೆ ಗುಣವಾದ. ಬಾಟ್ಲಿಗೆ 1 ರೂ.

ಗಡೆಕಲ್ಲ ಸಾಮಿ ಅಂಡ್ ಕಂಪನಿ, ಮತ್ತು ಕೊಪ್ಪಸ್ಸಿ,
(52-13) ಸಿದ್ದಾಪುರ, ಕೂರ್ಗ್ ಜಿಲ್ಲೆ.

ಮೂರಾಟಕ್ಕೆ ತಯಾರಾಗಿದೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ಬೇಕಾದ ರಿಜಿಸ್ಟರುಗಳು ಅಂದರೆ-ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನ್ನಿಟ್ಟಿರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕ, ಲೆಡ್ಜರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಒಪ್ಪಂದ ಸಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸ ಭಂಡಾರದ ಖರೀದಿ, ಸ್ಟೋರ್ ಕೀಪರ್ ಬಾಂಡು ದಾವಾ ಮತ್ತು ಅಮಲ್ದಾರಿ ಫಾರ್ಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

Shorthand, Typing etc.

ಶಾರ್ಟ್‌ಹೆಂಡ್, ಟ್ಯಾಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿಯಲ್ಲಿರುವ ಆೃಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara, and Virajapet.

3-10

ನಿಮ್ಮ ಜಾಹಿರಾತುಗಳಿವೆಯೋ? ಇನ್ನಾದರೆ ಇಂದೇ
'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ
ಲಾಭ ಪಡೆಯಿರಿ. ದರ ಅತೀ ಕಡಿಮೆ.

ಕೇರಳ ಆಯುರ್ವೇದಿಕ್

ವೈದ್ಯಾಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:-ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಸಲಜರ್,(ರಿಜಿಸ್ಟರ್ಡ್.)
ಮೆಡಿಲ್ ಪ್ರಾಕ್ಟಿಶನರ್, ವೀರಾಜಪೇಟೆ.

52-6

Printed & Published by P. J. [illegible], at 'Kodagu' Press Mercara for 'Kodagu' Ltd.